# ಮೋಜಿನ ಗಣಿತ

## ಪಠ್ಯ ಪುಸ್ತಕ

### ತರಗತಿ 1

© NCERT not to be republished

QRickit
0124

विद्यया ऽमृतमश्नुते
एन सी ई आर टी
NCERT

राष्ट्रीय शैक्षिक अनुसंधान और प्रशिक्षण परिषद्
NATIONAL COUNCIL OF EDUCATIONAL RESEARCH AND TRAINING

**0124–ಸಂಗಸ ಮೋಈನ ಗಖಿಗ**
ಪಠ್ಯ ಪುಸ್ತಕ ತರಗತಿ–1

ISBN 978-93-5292-505-6

**ಮೊದಲ ಆವೃತ್ತಿ**
ಮೇ 2023 ವೈಶಾಖ 1945

**PD 1000T BS**

***© ರಾಷ್ಟ್ರೀಯ ಕೌನ್ಸಿಲ್ ಆಫ್ ಎಜುಕೇಷನಲ್ˆ ಸಂಶೋಧನೆ ಮತ್ತು ತರಬೇತಿ 2023***

**ಎಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದ**

- ಈ ಪ್ರಕಟಣೆಯ ಯಾವುದೇ ಭಾಗವನ್ನು ಮರು ಉತ್ಪಾದಿಸಬಹುದು ಮತ್ತು ಸಂಗ್ರಹಿಸಬಹುದು ಅಥವಾ ಯಾವುದೇ ರೂಪದಲ್ಲಿ ಅಥವಾ ಯಾವುದೇ ರೀತಿಯಲ್ಲಿ ಎಲೆಕ್ಟ್ರಾನಿಕ್ ತಾಂತ್ರಿಕ ಮರುಮುದ್ರಣ ಚಿತ್ರೀಕರಣವನ್ನು ನ್ಯಾಯಾಲಯದ ಪೂರ್ವ ಅನುಮತಿಯಿಲ್ಲದೆ ಪ್ರಕಾಶನ ಮಾಡಬಾರದು.
- ಈ ಪುಸ್ತಕವನ್ನು ಪ್ರಕಾಶಕರ ಅನುಮತಿಯಿಲ್ಲದೆ ಮರು ಮುದ್ರಣ ಮಾಡುವುದು. ವ್ಯಾಪಾರದ ಮೂಲಕ ಮರುಮಾರಾಟ ಮಾಡುವುದು. ಒಪ್ಪಿಗೆಯಿಲ್ಲದೆ ವಿಲೇವಾರಿ ಮಾಡಬಾರದು ಎಂಬ ಷರತ್ತಿನ ಮೇರೆಗೆ ಮಾರಾಟ ಮಾಡಲಾಗುತ್ತದೆ ಎಂದು ಪ್ರಕಟಿಸಲಾಗಿದೆ.
- ಈ ಪುಸ್ತಕದ ನಿಖರ ಬೆಲೆ ಪ್ರಕಾಶಕರು ನಿಗಧಿಗೊಳಿಸಿ ಮುದ್ರಿಸಿರುತ್ತಾರೆ. ಅದನ್ನು ಆಳಸಿ ರಬ್ಬರ್ ಸ್ಟಾಂಪ್ ಅಥವಾ ಸ್ಟಿಕರ್ ಮೂಲಕ ಬೆಲೆಯನ್ನು ಸೂಚಿಸುವುದು ತಪ್ಪು ಇದನ್ನು ಪ್ರಕಾಶಕರು ಸ್ವೀಕಾರ ಮಾಡುವುದಿಲ್ಲ.

**ಪ್ರಕಟಣೆಯ ಕಛೇರಿಗಳ ವಿಭಾಗ**
**ಎನ್.ಸಿ.ಇ.ಆರ್**

ಎನ್.ಸಿ.ಇ.ಆರ್.ಟಿ ಅವರಣ (ಕ್ಯಾಂಪಸ್)
ಶ್ರೀ ಅರಬಿಂದು ಮಾರ್ಗ
**ಹೊಸ ದೆಹಲಿ 110 016** **ದೂರವಾಣ : 011-26562708**

108, 100 ಅಡಿ ರಸ್ತೆ ಹೊಸಕೇರೆ
ಹಳ್ಳಿ ಬಡಾವಣೆ
ಬನಶಂಕರಿ 3ನೇ ಹಂತ
**ಬೆಂಗಳೂರು 560085** **ದೂರವಾಣ : 080-26725740**

ನವಜೀವನ್ ಟ್ರಸ್ಟ್ ಕಟ್ಟಡ
P.O.ನವಜೀವನ್
**ಅಹಮದಾಬಾದ್ 380 014** **ದೂರವಾಣ : 079-27541446**

ಸಿ.ಡಬ್ಲ್ಯು.ಸಿ ಅವರಣ ಧನಕಲ್
ಬಸ್ ನಿಲ್ದಾಣ ಮುಂಭಾಗ
ಪುನಿಹಟಿ
**ಕೊಲ್ಕತ್ತಾ 700114** **ದೂರವಾಣ : 033-25530454**

ಸಿ.ಡಬ್ಲ್ಯು.ಸಿ ಮಳಿಗೆ
ಮಲಿಗಾಂವ್
**ಗುವಾಹಟ್ಟಿ 781 021** **ದೂರವಾಣ : 0361-2674869**

**₹ 65.00**

*ಪ್ರಕಾಶನ 80 ಜಿ ಎಸ ಎಮ್ ಕಾಗದ ಮೇಲೆ ಎನ ಸಿ ಅರ್ ಟಿ ನೀರಿನ ಚಿನ್ಹೆ*

ಪ್ರಕಾಶನ ವಿಭಾಗದಲ್ಲಿ ಪ್ರಕಟಿಸಲಾಗಿದೆ ಕಾರ್ಯದರ್ಶಿ. ರಾಷ್ಟ್ರೀಯ ಕೌನ್ಸಿಲ್ ಆಫ್ ಇಂಡಿಯಾ ಶೈಕ್ಷಣೀಕ ಸಂಶೋಧನೆ ಮತ್ತು ತರಬೇತಿ ಶ್ರೀ ಅರಬಿಂದು ಮಾರ್ಗ ನವದೆಹಲಿ 110016 ಮತ್ತು ಶ್ರೀ ರಾಮ್ ಪ್ರಿಂಟರ್ಸ್ ಡಿ–6 ನಲ್ಲಿ ಮುದ್ರಿಸಲಾಗಿದೆ. ಎಫ್–455 ಸೆಕ್ಟರ್–63 ನೊಯಿಡಾ – 201301 (ಯು.ಪಿ)

## ಪ್ರಕಾಶನ ತಂಡ

ಮುಖ್ಯಸ್ಥರು ಪ್ರಕಟಣೆಯ ವಿಭಾಗ: ಅನುಪ್ ಕುಮಾರ್ ರಾಜಪೂತ್

| | |
|---|---|
| ಮುಖ್ಯ ಉತ್ಪಾದಕ ಅಧಿಕಾರಿ | : ಅರುಣ್ ಚಿತ್ಕಾರ |
| ಮುಖ್ಯ ವ್ಯವಹಾರ ವ್ಯವಸ್ಥಾಪಕಯ | : ವಿಪಿನ್ ದಿವಾನ್ |
| ಮುಖ್ಯ ಸಂಪಾದಕರು (ಉಸ್ತುವಾರಿ) | : ಬಿಜ್ರಾನ್ ಸುತಾರ್ |
| ಉತ್ಪಾದಕ ಅಧಿಕಾರಿಗಳು | : ಅತುಲ್ ಸಕ್ಸೇನಾ |

**ಮುಖಪುಟ**
ಸಂತೋಷ್ ಮಿಶ್ರಾ

© NCERT not to be republished

# ಮುನ್ನುಡಿ

ಮಕ್ಕಳ ಅತ್ಯಂತ ರಚನಾತ್ಮಕ ಅವಧಿಯಲ್ಲಿ ಸಮಗ್ರ ಅಭಿವೃದ್ಧಿಯನ್ನು ಪೋಷಿಸುವಂತಹ ಶ್ರೀಮಂತ ಸಂಪ್ರದಾಯವು ನಮ್ಮ ಭಾರತದಲ್ಲಿದೆ. ಈ ಸಂಪ್ರದಾಯಗಳು, ವಿಭಕ್ತ ಕುಟುಂಬ, ಅವಿಭಕ್ತ ಕುಟುಂಬ, ಸಮುದಾಯ ಹಾಗೂ ಕಾಳಜಿ ಮತ್ತು ಕಲಿಕೆಯನ್ನು ನೀಡುವ ಔಪಚಾರಿಕ ಸಂಸ್ಥೆಗಳಿಗೆ ಪೂರಕ ಪಾತ್ರಗಳನ್ನು ಒದಗಿಸುತ್ತದೆ . ಮಗುವಿನ ಜೀವನದ ಮೊದಲ ಎಂಟು ವರ್ಷಗಳ ಬೋಧನೆಯಲ್ಲಿ, ಈ ಸಮಗ್ರ ವಿಧಾನವು ಮಗುವಿನ ಬೆಳವಣಿಗೆ, ಆರೋಗ್ಯ ನಡವಳಿಕೆ ಮತ್ತು ಅರಿವಿನ ಸಾಮರ್ಥ್ಯಗಳಂತಹ ಪ್ರತಿಯೊಂದು ಅಂಶದ ಮೇಲೂ ಜೀವನ ಪರ್ಯಂತ ಪ್ರಮುಖ ಮತ್ತು ಗುಣಾತ್ಮಕ ಪ್ರಭಾವವನ್ನು ಬೀರುತ್ತದೆ. ಇದರಲ್ಲಿ, ಪೀಳಿಗೆ ಇಂದ ಪೀಳಿಗೆಗೆ ಹರಿದು ಬರುವ ಸಂಸ್ಕಾರದ ಕೃಷಿಯೂ ಒಳಗೊಂಡಿದೆ.

ಮಗುವಿನ ಜೀವನಪರ್ಯಂತ ಬೆಳವಣಿಗೆಯ ಆರಂಭಿಕ ವರ್ಷಗಳ ಮಹತ್ವವನ್ನು ಪರಿಗಣಿಸಿ, ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್ .ಇ . ಪಿ 2020) ಆವಿಷ್ಕರಿಸಿದ 5+3+3+4 ಪಠ್ಯಕ್ರಮ ಮತ್ತು ಬೋಧನಾ ರಚನೆಯು , ಬುನಾದಿ ಹಂತ ಎಂದು ಕರೆಯುವ ೩ ರಿಂದ ೮ ವರ್ಷಗಳ ವಯಸ್ಸಿನವರೆಗಿನ ಆ ಮೊದಲ ಐದು ವರ್ಷಗಳಲ್ಲಿ ನಮ್ಮ ದೇಶದಲ್ಲಿ ಬಹಳ ಅಗತ್ಯವಿರುವ ಔಪಚಾರಿಕ ಶಿಕ್ಷಣ ಮತ್ತು ಶಿಶುಪಾಲನೆಗೆ ಒತ್ತು ಕೊಡಲಾಗಿದೆ.

1 ಮತ್ತು 2 ನೆಯ ತರಗತಿಗಳು ಈ ಬುನಾದಿ ಹಂತದ ಅವಿಭಾಜ್ಯ ಭಾಗವಾಗಿದ್ದು, 3 ರಿಂದ 6 ವರ್ಷದ ಮಕ್ಕಳ ಸಮಗ್ರ ಬೆಳವಣಿಗೆಯ ಜವಾಬ್ದಾರಿಯನ್ನು ಬಾಲವಾಟಿಕೆಯಲ್ಲಿ ತೆಗೆದುಕೊಳ್ಳಲಾಗುತ್ತದೆ. ವ್ಯಕ್ತಿಯ ಜೀವನ ಪರ್ಯಂತ ಕಲಿಕೆ, ಸಾಮಾಜಿಕ ಮತ್ತು ಭಾವನಾತ್ಮಕ ನಡವಳಿಕೆ ಮತ್ತು ಸಮಗ್ರ ಆರೋಗ್ಯವು ಈ ಬುನಾದಿ ಹಂತದಲ್ಲಿ ಅರ್ಜಿಸಿದ ಅನುಭವಗಳ ಮೇಲೆ ಆಳವಾಗಿ ಅವಲಂಬಿಸಿರುತ್ತದೆ.

ಶಾಲಾ ಶಿಕ್ಷಣದ ಮೇಲಿನ ಹಂತಗಳಿಗೂ ಇದರ ಚಲನಶೀಲತೆಯು ಪ್ರಭಾವ ಬೀರಬಲ್ಲಂತಹ, ಮಕ್ಕಳ ಎಳೆಯ ವಯಸ್ಸಿನಲ್ಲಿ ಉನ್ನತ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ವ್ಯಾಪಕವಾಗಿ ಮಾರ್ಗದರ್ಶನ ನೀಡಬಲ್ಲಂತಹ ಒಂದು ರಾಷ್ಟ್ರೀಯ ಪಠ್ಯಕ್ರಮವನ್ನು , ಮುಖ್ಯವಾಗಿ ಈ ಹಂತಕ್ಕೆ, ಅಭಿವೃದ್ಧಿ ಪಡಿಸಲು ಶಿಕ್ಷಣ ನೀತಿಯು ಶಿಫಾರ್ಸು ಮಾಡಿತು. NEP 2020 ಹಾಗೂ (ನರವಿಜ್ಞಾನ ಮತ್ತು ಆರಂಭಿಕ ಬಾಲ್ಯ ಶಿಕ್ಷಣವೂ ಒಳಗೊಂಡಂತೆ ) ಅನೇಕ ಶಿಸ್ತುಗಳಲ್ಲಿ ನಡೆಸಿದ ಸಂಶೋಧನೆಗಳ ಆಧಾರದ ಮೇಲೆ, ಅನುಭವ ಮತ್ತು ಕ್ರೋಡೀಕೃತ ಜ್ಞಾನದ ಆಧಾರದ ಮೇಲೆ, ಹಾಗೂ ನಮ್ಮ ದೇಶದ ಆಸೆ ಆಕಾಂಕ್ಷೆಗಳ ಆಧಾರದ ಮೇಲೆ ನಿರೂಪಿಸಿದ ತತ್ವಗಳು ಹಾಗೂ ಉದ್ದೇಶಗಳ ಆಧಾರದ ಮೇಲೆ ಬುನಾದಿ ಹಂತಕ್ಕೆ (NCF-FS) ರಾಷ್ಟ್ರೀಯ ಪಠ್ಯಕ್ರಮದ ರಚನೆ

© NCERT not to be republished

ಅಭಿವೃದ್ಧಿ ಪಡಿಸಿ ೨೨ನೆಯ ಅಕ್ಟೋಬರ್ 2022 ರಂದು ಬಿಡುಗಡೆ ಮಾಡಲಾಯಿತು . ತರುವಾಯ, ಪಠ್ಯ ಪುಸ್ತಕಗಳನ್ನು ರಚಿಸಿ NCF-FS ನ ಪಠ್ಯಕ್ರಮಕ್ಕೆ ಜೀವ ತರಲಾಯಿತು. ತರಗತಿಯಲ್ಲಿ ಮಕ್ಕಳ ಕಲಿಕೆ ಮತ್ತು ಸಂಸಾರ ಮತ್ತು ಸಮಾಜದ ಗಮನಾರ್ಹ ಕಲಿಕೆಯ ಸಂಪನ್ಮೂಲಗಳನ್ನು ಗುರುತಿಸಿ ಈ ಪಠ್ಯ ಪುಸ್ತಕಗಳು ಮಕ್ಕಳ ನಿಜ ಜೀವನಕ್ಕೆ ಸಂಬಂಧಿಸುವ ಪ್ರಯತ್ನ ಪಟ್ಟಿದೆ.

NCF-FS ವಿಧಾನವು ತೈತ್ತಿರೀಯ ಉಪನಿಷತ್ತಿನಲ್ಲಿ ಸ್ಪಷ್ಟ ಪಡಿಸಿರುವ ಹಾಗೆ ಪಂಚಕೋಶೀಯ ವಿಕಾಸದ ( ಮನುಷ್ಯನ ವ್ಯಕ್ತಿತ್ವದ ಐದು ಕವಚಗಳ ಬೆಳವಣಿಗೆಯ) ಪ್ರತಿಧ್ವನಿಯಾಗಿದೆ. ಕಲಿಕೆಯ ಐದು ಪ್ರಮುಖ ಕ್ಷೇತ್ರಗಳಾದ ಭೌತಿಕ ಮತ್ತು ಚಾಲನಾತ್ಮಕ ; ಸಾಮಜಿಕ -ಭಾವನಾತ್ಮಕ, ಅರಿವಿನ; ಭಾಷೆ ಮತ್ತು ಸಾಕ್ಷರತೆ ; ಹಾಗೂ ಸಾಂಸ್ಕೃತಿಕ ಮತ್ತು ಸೌಂದರ್ಯ ಕ್ಷೇತ್ರಗಳನ್ನು NCF-FS ನಿರೂಪಿಸುತ್ತದೆ. ಇದು ಭಾರತೀಯ ಸಂಸ್ಕೃತಿಯ ಅನ್ನಮಯ , ಪ್ರಾಣಮಯ, ಮನೋಮಯ, ವಿಜ್ಞಾನಮಯ, ಮತ್ತು ಆನಂದಮಯ ಕೋಶಗಳನ್ನು ಸ್ಥೂಲವಾಗಿ ಸಂಬಂಧಿಸಿದೆ . ಇಷ್ಟಲ್ಲದೆ, ಮಗು ಮನೆಯಲ್ಲಿ ಜ್ಞಾನ, ಕೌಶಲ್ಯ, ಧೋರಣೆಗಳ ಅನುಭವವನ್ನು ಪಡೆದು, ಶಾಲೆಯ ಆವರಣದಲ್ಲಿ ಅವುಗಳನ್ನು ವಿಕಾಸನಗೊಳಿಸಲು ನೆರವಾಗುವ ಸಂಯೋಜನೆಗಳತ್ತ ಇದು ಕೇಂದ್ರೀಕರಿಸುತ್ತದೆ.

ತರಗತಿ 1 ಮತ್ತು 2 ಅನ್ನು ಒಳಗೊಂಡ NCF-FS, ಕ್ರೀಡಾ ಆಧಾರಿತ ಕಲಿಕೆಯ ಅನುಸಂಧಾನವನ್ನು ಅಭಿವ್ಯಕ್ತಗೊಳಿಸುತ್ತದೆ. ಈ ವಿಧಾನದ ಪ್ರಕಾರ ಪುಸ್ತಕಗಳು ಕಲಿಕೆಯ ಒಂದು ಪ್ರಮುಖ ಭಾಗವೇ ಆದರೂ, ಅದು ಕೇವಲ ಅನೇಕ ಕಲಿಕಾ ವಿಧಾನ ಮತ್ತು ಉಪಕರಣಗಳಲ್ಲಿ ಒಂದು ಮಾತ್ರ. ಚಟುವಟಿಕೆಗಳು, ಆಟಗಳು, ಆಟಿಕೆಗಳು, ಸಂಭಾಷಣೆ, ಚರ್ಚೆ, ಇಂತಹ ಹಲವಾರು ಕಲಿಕಾ ವಿಧಾನ ಮತ್ತು ಉಪಕರಣಗಳು ಇವೆ. ಈಗ ಇರುವ ಕೇವಲ ಪುಸ್ತಕದಿಂದ ಕಲಿಯುವ ಸಾಂಪ್ರದಾಯಿಕ ವಿಧಾನದಿಂದ ನಿರ್ಗಮಿಸಿ, ಹೆಚ್ಚು ಸೌಹಾರ್ದಯುತ, ಕ್ರೀಡಾ ವಿಧಾನದ ಮತ್ತು ಸಾಮರ್ಥ್ಯ ಆಧಾರಿತ ಕಲಿಕಾ ವಿಧಾನದತ್ತ ಹೊರಟಿದ್ದೇವೆ. ಇಲ್ಲಿ ಮಕ್ಕಳು ತಾವು ಮಾಡಿ ಕಲಿಯುವಲ್ಲಿ ತಲ್ಲೀನರಾಗುವುದು ನಿರ್ಣಾಯಕವಾಗುತ್ತದೆ. ಹೀಗಾಗಿ ಕೈಲಿ ಹಿಡಿದ ಪುಸ್ತಕವು ಈ ವಯಸ್ಸಿನ ಮಕ್ಕಳಿಗೆ ಕೇವಲ ಆಟ-ಪ್ರಧಾನವಾದ ಕಲಿಕೆಯನ್ನು ಉತ್ತೇಜಿಸುವ ಉಪಕರಣವಾಗುತ್ತದೆ.

ಈ ಪ್ರಸ್ತುತ ಪಠ್ಯ ಪುಸ್ತಕವು ಸಾಮರ್ಥ್ಯ ಆಧಾರಿತ ವಸ್ತುವನ್ನು ಸರಳ , ಆಕರ್ಷಕ , ತೊಡಗಿಸಿಕೊಳ್ಳುವ ರೀತಿ ರೂಪಿಸಲಾಗಿದೆ. ಈ ಪ್ರಯತ್ನವು ಅನೇಕ ಏಕತಾನಗಳನ್ನು ಮುರಿದು, ಚಿತ್ರಗಳ ಮತ್ತು ನಿರೂಪಣೆಯ ವಿಧಾನಗಳಲ್ಲಿ ಅಂತರ್ಗತ ಮತ್ತು ಪ್ರಗತಿಪರ ಧೋರಣೆ ಹೊಂದಿ, ಮಾಡಲಾಗಿದೆ. ಈ ಪುಸ್ತಕದಲ್ಲಿ ಸಂಪ್ರದಾಯ, ಸಂಸ್ಕೃತಿ , ಭಾಷಾ ಬಳಕೆ , ಭಾರತೀಯತೆಯಲ್ಲಿ ಅದರ ಬೇರುಗಳು, ಮತ್ತು ಸಮಗ್ರ ಅಭಿವೃದ್ಧಿ ಪ್ರತಿಬಿಂಬಿತವಾಗಿದೆ. ಪಾಠಗಳು ಮಕ್ಕಳಿಗೆ ಆಕರ್ಷಕವಾಗಿಯೂ, ಸಂತೋಷದಾಯಕವಾಗಿಯೂ ಇರುವಂತೆ ಪ್ರಯತ್ನಿಸಲಾಗಿದೆ. ಪಠ್ಯವು ಕಲೆ ಮತ್ತು ಕರಕುಶಲತೆಯನ್ನು ಒಂದುಗೂಡಿಸುವ ಪ್ರಯತ್ನ ಮಾಡಿದೆ. ಇಂತಹ ಚಟುವಟಿಕೆಗಳಲ್ಲಿ ಅಡಕವಾಗಿರುವ ಸೌಂದರ್ಯ ಪ್ರಜ್ಞೆಯನ್ನು ಮಕ್ಕಳು ಪ್ರಶಂಸಿಸುವ ಹಾಗೆ ರಚಿಸಲಾಗಿದೆ. ಪಠ್ಯದಲ್ಲಿ ಮಕ್ಕಳಿಗೆ ತಮಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಅರಿಯಲು ತಮ್ಮದೇ ಆದ ಸನ್ನಿವೇಶಗಳನ್ನು ಒದಗಿಸಿ ಸಾಂದರ್ಭಿಕ ಅರಿವು ಮೂಡಿಸುತ್ತದೆ.

ವಿಷಯವು ಹಗುರಾಗಿಯೇ ಇದ್ದರು ಸಹ ಈ ಪಠ್ಯ ಪುಸ್ತಕದಲ್ಲಿ ತಾತ್ಪರ್ಯವು ಶ್ರೀಮಂತವಾಗಿದೆ. ಬಗೆಬಗೆಯ ಅನುಭವಗಳನ್ನು ಒದಗಿಸಿ, ಆಟಿಕೆಗಳು, ಕ್ರೀಡೆಗಳು, ವೈವಿಧ್ಯಮಯವಾದ ಚಟುವಟಿಕೆಗಳನ್ನು ಪರಿಚಯಿಸಿ, ಕ್ರೀಡಾ ವಿಧಾನದಲ್ಲಿ ಕಲಿಸಲಾಗುತ್ತದೆ. ಈ ಚಟುವಟಿಕೆಗಳಲ್ಲಿ ವಿಮರ್ಶಾತ್ಮಕ ಚಿಂತನೆಗಳನ್ನು ಮೂಡಿಸುವ, ಸಮಸ್ಯೆ ಬಗೆಹರಿಸುವ ಸಾಮರ್ಥ್ಯ ಬೆಳೆಸುವಂತಹ ವಿಪುಲವಾದ ಪ್ರಶ್ನೆಗಳನ್ನು ಒಳಗೊಂಡಿವೆ.

ಇಷ್ಟಲ್ಲದೆ, ಪಠ್ಯ ಪುಸ್ತಕದಲ್ಲಿ ಹೇರಳವಾಗಿರುವ ವಿಷಯ ಮತ್ತು ಚಟುವಟಿಕೆಗಳು ತಮ್ಮ ಪರಿಸರಕ್ಕೆ ಮಕ್ಕಳು ಪ್ರತಿಸ್ಪಂದಿಸುವಂತೆ ಮಾಡಬಲ್ಲದು. NEP 2020ರ ಶಿಫಾರಸುಗಳ ಅನ್ವಯ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ತಮ್ಮ ಆವೃತ್ತಿಗಳಲ್ಲಿ ಸ್ಥಳೀಯ ದೃಷ್ಟಿಕೋನಗಳಿಗೆ ಪೂರಕವಾದ ಮಾರ್ಪಾಟುಗಳನ್ನು ಮಾಡಿಕೊಳ್ಳಲು ವಿಪುಲವಾದ ಅವಕಾಶಗಳು ಒದಗಿಸುತ್ತದೆ.

ಬುನಾದಿ ಹಂತಕ್ಕೆ ಪಠ್ಯಕ್ರಮ ಅಭಿವೃದ್ಧಿ ಪಡಿಸಿ ಕಲಿಕಾ ಸಾಮಗ್ರಿ ಒದಗಿಸಿದ ಸಮಿತಿಯ ಪರಿಶ್ರಮವನ್ನು NCERT ಶ್ಲಾಘಿಸುತ್ತದೆ. ಕೆಲಸವನ್ನು ಸಕಾಲದಲ್ಲಿ ಹಾಗು ಅಚ್ಚುಕಟ್ಟಾಗಿ ಮುಗಿಸಿಕೊಟ್ಟ ಈ ಸಮಿತಿಯ ಅಧ್ಯಕ್ಷೆಯಾದ ಪ್ರೊಫೆಸರ್ ಶ್ರೀಮತಿ ಶಶಿಕಲಾ ವಂಜರಿ , ಮತ್ತು ಇತರ ಎಲ್ಲ ಸದಸ್ಯರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಮ್ಮ ನೆರವು ಮತ್ತು ಸಹಾಯವನ್ನು ನೀಡಿದ ಎಲ್ಲ ಸಂಸ್ಥೆ ಮತ್ತು ಸಂಘಟನೆಗಳಿಗೂ ಸಹ ನಾನು ಆಭಾರಿಯಾಗಿದ್ದೇನೆ. ರಾಷ್ಟ್ರೀಯ ಚಾಲನಾ ಸಮಿತಿಯ ಅಧ್ಯಕ್ಷರಾದ ಡಾ. ಕೆ. ಕಸ್ತೂರಿರಂಗನ್ ಮತ್ತು ಇತರ ಸದಸ್ಯರಿಗೆ ನಾನು ವಿಶೇಷವಾಗಿ ಆಭಾರಿಯಾಗಿದ್ದೇನೆ. Mandate Group ಮತ್ತು ಅದರ ಅಧ್ಯಕ್ಷರು ಪ್ರೊ. ಮಂಜುಲ್ ಭಾರ್ಗವ ಮತ್ತು ಪರಿಶೀಲನಾ ಸಮಿತಿಯ ಸದಸ್ಯರಿಗೂ ಸಹ ತಮ್ಮ ಸಕಾಲಿಕ ಮತ್ತು ಅಮೂಲ್ಯ ಸಲಹೆಗಳಿಗಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಭಾರತದ ಶಾಲಾ ಶಿಕ್ಷಣವನ್ನು ಸುಧಾರಿಸುವ ಕಂಕಣ ತೊಟ್ಟ ಸಂಸ್ಥೆಯಾಗಿ ನಿರಂತರವಾಗಿ ಅದು ಸಿದ್ಧ ಪಡಿಸಿದ ಎಲ್ಲ ಬೋಧನಾ- ಕಲಿಕಾ ವಸ್ತುಗಳ ಗುಣಮಟ್ಟವನ್ನು ಉತ್ತಮಗೊಳಿಸುತ್ತಿರುವ NCERTಯು ಈ ಪಠ್ಯ ಪುಸ್ತಕವನ್ನು ಇನ್ನಷ್ಟು ಉತ್ತಮಪಡಿಸಲು ಬೇಕಾದ ವಿಮರ್ಶಾತ್ಮ ಟೀಕೆ, ಸಲಹೆಗಳನ್ನು ತನ್ನ ಪಾಲುದಾರರಿಂದ ನಿರೀಕ್ಷಿಸುತ್ತದೆ .

ಪ್ರೊ. ದಿನೇಶ್ ಪ್ರಸಾದ್ ಸಕ್ಲಾನಿ
ನಿರ್ದೇಶಕರು,
ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು
ತರಬೇತಿ ಪರಿಷತ್ತು

27 ಜನವರಿ 2023
ಹೊಸ ದೆಹಲಿ

© NCERT not to be republished

© NCERT
not to be republished

# ಈ ಪುಸ್ತಕದ ಬಗ್ಗೆ

2020ರ ರಾಷ್ಟ್ರೀಯ ಶಿಕ್ಷಣ ಕಾಯಿದೆಯು ಆರಂಭಿಕ ಬೆಳವಣಿಗೆಯ ವಯಸ್ಸಿನಲ್ಲಿ (3-8 ವರ್ಷ) ಮಕ್ಕಳಿಗೆ ಬಲವಾದ ಕಲಿಕೆಯ ಬುನಾದಿ ಅಗತ್ಯವಿರುವುದನ್ನು ಮನಗಂಡು, ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆಯ ಮೇಲೆ ಒತ್ತು ನೀಡುವುದರ ಮಹತ್ವವನ್ನು ಪರಿಗಣಿಸಿದೆ. ಮಕ್ಕಳ ಸಮಗ್ರ ಅಭಿವೃದ್ಧಿಯ ಈ ದಿಸೆಯಲ್ಲಿ ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು (NCF-FS), ಕೆಲವು ಪಠ್ಯಕ್ರಮದ ಗುರಿಗಳು, ಸಾಮರ್ಥ್ಯಗಳು ಮತ್ತು ಕಲಿಕೆಯ ಫಲಿತಾಂಶಗಳನ್ನು ಶಿಫಾರಸು ಮಾಡಿದೆ. ಇವು ಬೆಳವಣಿಗೆಯ ಕ್ಷೇತ್ರಗಳಾದ ಭೌತಿಕ , ಸಾಮಾಜಿಕ-ಭಾವನಾತ್ಮಕ-ನೈತಿಕ, ಅರಿವಿನ, ಭಾಷೆ ಮತ್ತು ಸಾಕ್ಷರತೆ, ಸೌಂದರ್ಯ ಮತ್ತು ಸಾಂಸ್ಕೃತಿಕ ಮತ್ತು ಗುಣಾತ್ಮಕ ಕಲಿಕಾ ಪದ್ಧತಿಗಳಿಗೆ ಜೋಡಿಸಲ್ಪಟ್ಟಿವೆ. ಇದರ ಮುಂದುವರಿದ ಭಾಗವಾಗಿ, ಬುನಾದಿ ಹಂತಕ್ಕೆ NCERT ಗಣಿತ ಮತ್ತು ಗಣಿತಜ್ಞತೆಯ ಅರಿವಿನ ಕ್ಷೇತ್ರದಲ್ಲಿ ಪಠ್ಯ ಕ್ರಮವನ್ನು ಅಭಿವೃದ್ಧಿಪಡಿಸಿದೆ . ಗಣಿತದ ಪಠ್ಯ ಪುಸ್ತಕ ರಚಿಸುವ ಕೆಲಸವನ್ನೂ ಒಳಗೊಂಡಂತೆ ಎಲ್ಲ ಇತರ ಡೊಮೇನ್ ಗಳೊಂದಿಗೆ ಸಮೀಕರಣ ಗೊಂಡು ಕಲಿಕಾ- ಬೋಧನಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲು ಒತ್ತು ನೀಡಿದೆ.

ಗಣಿತದ ಈ ಪಠ್ಯ ಪುಸ್ತಕವನ್ನು , ಅಂದರೆ, ಮೋಜಿನ ಗಣಿತ, ತರಗತಿ -೧ ಅನ್ನು , NEP 2020, NCF-FS ಮಾಡಿರುವ ಶಿಫಾರಸುಗಳನ್ನು ಗಮನದಲ್ಲಿಟ್ಟುಕೊಂಡು, ಬುನಾದಿ ಹಂತಕ್ಕೆ ಸಿದ್ಧ ಪಡಿಸಲಾಗಿದೆ. 1 ನೇ ತರಗತಿಗೆ ಪ್ರವೇಶಿಸುವ ಮಗುವಿಗೆ ಬಾಲವಟಿಕ 1 ರಿಂದ 3 (ವಯಸ್ಸು 3-6 ವರ್ಷಗಳು) ರೂಪದಲ್ಲಿ ಮೂರು ವರ್ಷಗಳ ಮಧ್ಯಸ್ಥಿಕೆ ಇದೆ ಎಂದು ಭಾವಿಸಬಹುದಾದರೂ, ನಮ್ಮ ದೇಶದಲ್ಲಿನ ವೈವಿಧ್ಯತೆಯ ದೃಷ್ಟಿಯಿಂದ, 6 ವರ್ಷ ವಯಸ್ಸಿನಲ್ಲಿ ಸಾಂಸ್ಥಿಕ ವ್ಯವಸ್ಥೆಯಲ್ಲಿ ಮೊದಲ ಬಾರಿಗೆ ಗಣಿತಜ್ಞತೆ ಮಾನ್ಯತೆ ಪಡೆಯುವ ಮಕ್ಕಳೂ ಇರಬಹುದು. ಈ ಪಠ್ಯಪುಸ್ತಕವು ಅಂತಹ ಸಂದರ್ಭಗಳನ್ನೂ ಸಹ ನೋಡಿಕೊಳ್ಳುತ್ತದೆ.

ಈ ಹಂತದಲ್ಲಿ ಮಕ್ಕಳು ಸ್ವಚ್ಛಂದ ಆಟವನ್ನು, ಆಟಿಕೆಗಳನ್ನು ಕ್ರೀಡೆಗಳನ್ನು ಇಷ್ಟ ಪಡುತ್ತಾರೆ. ಹೀಗಾಗಿ ಆಟ ಮತ್ತು ಕ್ರೀಡೆಗೆ ವಿಪುಲವಾದ ಅವಕಾಶಗಳನ್ನು ಕಲ್ಪಿಸಲಾಗಿದೆ. ಈ ಚಟುವಟಿಕೆಗಳೊಂದಿಗೆ ಸ್ಥಳ ಮತ್ತು ಆಕಾರಕ್ಕೆ ಸಂಬಂಧಿತ ಅರ್ಥೈಸುವಿಕೆ , ಸಂಖ್ಯಾ ನಿರ್ವಹಣೆ, ಗಣಿತ ಹಾಗೂ ಗಣಕದಂತಹ ಅನೇಕ ಪರಿಕಲ್ಪನೆಗಳನ್ನೂ ಕಲಿಯುತ್ತಾರೆ. ಪರಿಚಯಿಸುವ ಪ್ರತಿಯೊಂದು ಹೊಸ ಸಾಮರ್ಥ್ಯ ಅಥವಾ ವಿಷಯವೂ ಭೌತಿಕ ದಿಂದ ದೃಶ್ಯ ಮಾಧ್ಯಮದ ಮೂಲಕ ಅಮೂರ್ತ ತಾರ್ಕಿಕ ಹಂತಕ್ಕೆ ಸರಾಗವಾಗಿ ಸಂಕ್ರಮಣಗೊಳ್ಳುವಂತೆ ರಚಿಸಲಾಗಿದೆ.

ತರಗತಿ -1 ಕ್ಕೆ ರಚಿಸಿರುವ ಮೋಜಿನ ಗಣಿತದಲ್ಲಿ, ಸಮಗ್ರ ಅಭಿವೃದ್ಧಿಯನ್ನು ನೀಡುವ ಅನುಭವದ ಕಲಿಕೆಯನ್ನು ಸಾಧಿಸುವ ಉದ್ದೇಶಕ್ಕಾಗಿ ತರಗತಿಯ ಒಳಗೆ ಮತ್ತು ಹೊರಗೆ ನಡೆಸ

© NCERT not to be republished

ಬಹುದಾದ ಅನೇಕ ಚಟುವಟಿಕೆಗಳನ್ನು ಸೂಚಿಸಲಾಗಿದೆ. ಎಲ್ಲ ಅಧ್ಯಾಯಗಳಲ್ಲೂ ಗಣಿತದ ಅರಿವನ್ನು ಆಟ -ಆಧಾರಿತ ಚಟುವಟಿಕೆಗಳಲ್ಲಿ ಕಟ್ಟಿಕೊಡಲಾಗಿದೆ. ಯಾವುದೇ ಸಂತೋಷವಿಲ್ಲದೆ ಲೆಕ್ಕವನ್ನು ಬಲವಂತವಾಗಿ ಅವರ ಮೇಲೆ ಹೇರುವ ಬದಲು , ಮಕ್ಕಳು, ' ನಾವು ಆಡುತ್ತಿದ್ದೇವೆ' ಎಂಬ ಭಾವನೆಯಲ್ಲಿ ಗಣಿತವನ್ನು ಕಲಿಯುವ ಹಾಗೆ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಗಣಿತವನ್ನು ಒಂಟಿಯಾಗಿ ಕಲಿಯಲು ಸಾಧ್ಯವಿಲ್ಲ ಆದ್ದರಿಂದ ಭಾಷೆಯನ್ನು ಕಲಿಯುವುದು, ಹಾಗೂ ವಯೋಸಹಜ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ಪುಸ್ತಕದೊಂದಿಗೆ ಸಂಯೋಜಿಸಲಾಗಿದೆ. ಪುಸ್ತಕದಲ್ಲಿ ಪೋಷಕರಿಗೆ, ಶಿಕ್ಷಕರಿಗೆ ಅಥವಾ ಇತರ ಸಂಬಂಧಿಸಿದ ಹಿರಿಯರಿಗೆ , ಮಕ್ಕಳೊಂದಿಗೆ ಆರೋಗ್ಯಕರ ಚರ್ಚೆ ಚಿಂತನೆಗೆ ಹಚ್ಚುವ ಪ್ರಶ್ನೆಗಳು , ಕಥೆಗಳು, ಕವನಗಳು ಇತ್ಯಾದಿ ನಡೆಸ ಬೇಕೆಂದು ಸಲಹೆಗಳನ್ನು ಮಾಡಲಾಗಿದೆ.

ವಿಭಿನ್ನ ಸಾಮರ್ಥ್ಯಗಳ ವಿದ್ಯಾರ್ಥಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು , ಅನೇಕ ಗಣಿತದ ಕಲ್ಪನೆಗಳನ್ನು ಸ್ವಯಂ ವಿವರಣಾತ್ಮಕ ಹಾಗೂ ಸಂದರ್ಭೋಚಿತ ಚಿತ್ರಗಳ ಮೂಲಕ ಪ್ರಸ್ತುತ ಪಡಿಸಲಾಗಿದೆ. ಜೊತೆಗೆ, ಅಂತಹ ಚಿತ್ರಗಳು ಮಕ್ಕಳ ದೃಶ್ಯ ಮತ್ತು ಓದುವ ಗ್ರಹಿಕೆಯನ್ನು ವರ್ಧಿಸುತ್ತದೆ.

ಈ ಪುಸ್ತಕವನ್ನು ಪಠ್ಯ ಹಾಗು ಅಭ್ಯಾಸ ಪುಸ್ತಿಕೆಯಾಗಿ ವಿನ್ಯಾಸ ಗೊಳಿಸಲಾಗಿದೆ. ಇದರಲ್ಲಿ ಮಕ್ಕಳಿಗೆ ಚಿತ್ರ ಬಿಡಿಸುವ, ಬಣ್ಣ ತುಂಬುವ ಮತ್ತು ಸೂಕ್ತವಾಗಿ ಬರೆಯಲು ಅವಕಾಶಗಳು ಕೊಡಲಾಗಿದೆ. ಅವರ ಆಲೋಚನಾ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಅನುವುಮಾಡಿಕೊಡಲು ಪ್ರತಿ ಅಧ್ಯಾಯದಲ್ಲೂ ಮಕ್ಕಳೊಂದಿಗೆ ಮೌಖಿಕ ಚರ್ಚೆಯನ್ನು ಕೊಡಲಾಗಿದೆ. ಜೊತೆಗೆ ಇದು ಶಿಕ್ಷಕರಿಗೆ ಮಕ್ಕಳನ್ನು ಭೀತಿ ರಹಿತ ವಾತಾವರಣದಲ್ಲಿ ನಿರಂತರವಾಗಿ ಮೌಲ್ಯಮಾಪನ ಮಾಡಲು ನೆರವಾಗುತ್ತದೆ. ಪ್ರಶ್ನೆಗಳು ಮತ್ತು ಅಭ್ಯಾಸ ಚಟುವಟಿಕೆಗಳ ರೂಪದಲ್ಲಿ ಅಭಿಪ್ರಾಯ ಪ್ರಚೋದಕ ಕೆಲಸಗಳನ್ನು ಕೊಡಲಾಗಿದೆ. ಉದ್ದೇಶಿತ ಕೌಶಲ್ಯಗಳ ಹೆಚ್ಚಿನ ಅಭ್ಯಾಸ ಮಾಡಲು ಶಿಕ್ಷಕರು ಮತ್ತು ಪೋಷಕರಿಗೂ ಇಂತಹ ಇನ್ನಷ್ಟು ಪ್ರಶ್ನೆಗಳನ್ನು ಅಭಿವೃದ್ಧಿ ಪಡಿಸಲು ನಿರೀಕ್ಷಿಸಲಾಗಿದೆ. ಒಂದನೆಯ ತರಗತಿಯ ಗಣಿತದ ಈ ಪಠ್ಯ ಪುಸ್ತಕವನ್ನು ಮೋಜಿನಿಂದ ಕಲಿಯಲು ಕ್ರಿಯಾತ್ಮಕವಾಗಿ ಬಳಸುವುದು ಪೋಷಕರ ಮತ್ತು ಶಿಕ್ಷಕರ ಕೈಲಿದೆ.

ತಾರ್ಕಿಕ ಆಲೋಚನೆ, ವಿಶ್ಲೇಷಣಾ ಕೌಶಲ್ಯ , ಮತ್ತು ಗಣಿತದ ಸಂವಹನ ಹಾಗೂ ೨೧ನೆಯ ಶತಮಾನದ ಕೌಶಲ್ಯಗಳನ್ನು ಚಟುವಟಿಕೆಗಳಿಂದ, ಮುಕ್ತ ಪ್ರಶ್ನೆಗಳಿಂದ, ಅನ್ವೇಷಣೆ ಮತ್ತು ಚರ್ಚೆಗಳಿಂದ ರೂಢಿಗೊಳಿಸಲು ಈ ಪುಸ್ತಕದಲ್ಲಿ ಒಂದು ಆರಂಭವನ್ನು ಮಾಡಲಾಗಿದೆ. ಪರಿಕಲ್ಪನಾ ತಿಳುವಳಿಕೆ , ಕಾರ್ಯವಿಧಾನದ ನಿರರ್ಗಳತೆ , ತಾರ್ಕಿಕ ಹೊಂದಾಣಿಕೆ, ಮತ್ತು ಗಣಿತದ ಬಗ್ಗೆ ಗುಣಾತ್ಮಕ ಧೋರಣೆಯೊಂದಿಗೆ ಗಣಿತದ ಪ್ರಾವೀಣ್ಯತೆಯತ್ತ ಪಯಣ ಪ್ರಾರಂಭಿಸಲು ಅಧ್ಯಾಯಗಳನ್ನು ರೂಪಿಸಲಾಗಿದೆ.

ಒಂದನೆಯ ತರಗತಿಗೆ ನಿಗದಿತವಾದ ಮೋಜಿನ ಗಣಿತ NCF-FS 2022. ನಲ್ಲಿ ಹೇಳಿರುವ ನಾಲ್ಕು ಘಟಕಗಳ ಮೇಲೆ ಆಧಾರಿತವಾಗಿದೆ. ಅವು- ಮೌಖಿಕ ಗಣಿತ ಚರ್ಚೆ, ಕೌಶಲ್ಯ ಬೋಧನೆ, ಕೌಶಲ್ಯ ಅಭ್ಯಾಸ, ಮತ್ತು ಗಣಿತದ ಆಟಗಳು . ಇವುಗಳನ್ನು ಎಲ್ಲ ಅಧ್ಯಾಯಗಳಲ್ಲೂ ಸೇರಿಸಲಾಗಿದೆ. ಬಹುತೇಕ ಎಲ್ಲವನ್ನು ಸಂಯೋಜಿತ ರೀತಿಯಲ್ಲಿ ಪ್ರಸ್ತುತ ಪಡಿಸಲಾಗಿದೆ. ಪ್ರಪಂಚವನ್ನು ಪ್ರಮಾಣ, ಆಕಾರ, ಮತ್ತು ಪರಿಮಾಣಗಳಾಗಿ ನೋಡುವ ಹಾಗೂ

ಗಣಿತಜ್ಞತೆಯನ್ನು ಅರ್ಥಮಾಡಿಕೊಳ್ಳಲು (CG-8) ಪಠ್ಯಕ್ರಮದ ಗುರಿಗೆ ಹೊಂದಿಕೊಂಡಿರುವುದು ಅಷ್ಟೇ ಅಲ್ಲ, NCF-FS 2022 ರಲ್ಲಿ ಕೊಟ್ಟಿರುವ ಉಳಿದ ಎಲ್ಲ ಪಠ್ಯ ಕ್ರಮದ ಗುರಿಗಳಿಗೂ ಮತ್ತು ಸಮಗ್ರ ಅಭಿವೃದ್ಧಿಗೆ ಕಾರಣವಾಗುವ ಪಠ್ಯಕ್ರಮಕ್ಕೂ ಹೊಂದಿಕೊಂಡಿದೆ.

- **ಮೌಖಿಕ ಗಣಿತದ ಮಾತು:** ಅಧ್ಯಾಯ ಒಂದರಲ್ಲಿ ಜೂಲು ಬೆಕ್ಕಿನ ಹುಡುಕಾಟ , ಚುಕುಬುಕು ಹೊರಟಿತು ರೈಲು , ಅಧ್ಯಾಯ 5 ರಲ್ಲಿ ಐದು ಪುಟ್ಟ ಮಕ್ಕಳು, ಇಂತಹ ಗಣಿತ ಕವನಗಳು , ಮತ್ತು ಅಧ್ಯಾಯ 2 ರಲ್ಲಿ ಜಾಣ ಅಜ್ಜಿ, ಅಧ್ಯಾಯ 3 ರಲ್ಲಿ ಮಾವಿನ ಹಣ್ಣಿನ ಔತಣ, ಮಾಯವಾಗುವ ಗುಂಡಿಗಳು ಅಧ್ಯಾಯ ೪ ರಲ್ಲಿ, ಅಜ್ಜನೊಂದಿಗೆ ವಿಹಾರ ಅಧ್ಯಾಯ ೫ ರಲ್ಲಿ ಉತ್ಸವ ಅಧ್ಯಾಯ ೯ ರಲ್ಲಿ, ಹಹೆಗೆ ನನ್ನ ದಿನವನ್ನು ಕಳೆಯುತ್ತೇನೆ ಅಧ್ಯಾಯ ೧೦ ರಲ್ಲಿ, , ಇತ್ಯಾದಿ , ಪರಿಕಲ್ಪನೆಗಳನ್ನು ಪರಿಚಯಿಸಲು ಮತ್ತು ಮೌಲ್ಯಮಾಪನಕ್ಕೆ ಚಿತ್ರ -ಕಥೆಗಳನ್ನು ಸೇರಿಸಲಾಗಿದೆ.
- **ಕೌಶಲ್ಯ ಬೋಧನೆ :** ಪ್ರತಿಯೊಂದು ಅಧ್ಯಾಯದಲ್ಲೂ ಮಕ್ಕಳು ಸ್ವತಂತ್ರವಾಗಿ, ಅಥವಾ ಗುಂಪಿನಲ್ಲಿ ಮಾಡಬಹುದಾದ , ಅಥವಾ ಹಿರಿಯರ ನೆರವಿನಿಂದ (ಪೋಷಕರು, ಶಿಕ್ಷಕರು, ಸಹೋದರರು) ಮಾಡಬಹುದಾದ ಚಟುವಟಿಕೆಗಳು ಇವೆ. ಇದು ಇತರರ ನೆರವು ಮತ್ತು ಮಾರ್ಗದರ್ಶನದಿಂದ ಮಗುವಿನ ವಿವಿಧ ಕೌಶಲ್ಯಗಳ ಬೆಳವಣಿಗೆಗೆ ಪೂರಕವಾಗಿದೆ.
- **ಕೌಶಲ್ಯ ಅಭ್ಯಾಸ:** ಪ್ರತಿ ಅಧ್ಯಾಯದಲ್ಲೂ ಸೇರಿಸಿರುವ ಮಾಡೋಣ ಬಾ, ನಿಯೋಜಿಕ ಕೆಲಸ, ಅಭ್ಯಾಸ ಪ್ರಶ್ನೆಗಳು, ಇಂತಹ ಚಟುವಟಿಕೆಗಳು ವಿದ್ಯಾರ್ಥಿಯ ಕೌಶಲ್ಯದ ಅಭ್ಯಾಸವನ್ನು ಮಾಡಲಿ ಅವಕಾಶ ನೀಡುತ್ತದೆ.
- **ಗಣಿತದ ಆಟಗಳು.** ಇಡೀ ಪುಸ್ತಕದ ಉದ್ದಕ್ಕೂ ಗಣಿತದ ಆಟಗಳನ್ನು, ಚಟುವಟಿಕೆಗಳನ್ನು ಎಲ್ಲ ಅಧ್ಯಾಯಗಳಲ್ಲೂ ಹೆಣೆಯಲಾಗಿದೆ.

ಪರಿಸರ ಪ್ರಜ್ಞೆ , ಮಾನವೀಯ ಮೌಲ್ಯಗಳು , ಸಕಾರಾತ್ಮಕ ಹವ್ಯಾಸಗಳು, ಸಾಂಸ್ಕೃತಿಕ ಬೇರುಗಳು, ಅಂತರ್ಗತ ದೃಷ್ಟಿಕೋನ ಇವುಗಳ ಬಗ್ಗೆ ಸಂವೇದನೆಗಳನ್ನು ಬೆಳೆಸಿಕೊಳ್ಳಲೆಂಬ ಉದ್ದೇಶದಲ್ಲಿ ಈ ಮೇಲಿನ ಅಧ್ಯಾಯಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಬಹುಭಾಷಾ ದೃಷ್ಟಿಕೋನವನ್ನೂ ಈ ಪುಸ್ತಕ ಪ್ರತಿಬಿಂಬಿಸುತ್ತದೆ. ಇಡೀ ಪಠ್ಯವನ್ನು ಮಕ್ಕಳು ಸಂತೋಷವಾಗಿ ಕಲಿಯಲು ತಲ್ಲೀನಗೊಳಿಸುವ, ಭಾಷೆಯನ್ನು ಅಭಿವೃದ್ಧಿಸಲು ಪ್ರೇರೇಪಿಸುವ ಚಟುವಟಿಕೆಗಳು ಒಳಗೊಂಡಿವೆ.

ಪ್ರತಿಯೊಂದು ಅಧ್ಯಾಯದ ಉದ್ದೇಶ ಏನೆಂಬುದನ್ನು ಶಿಕ್ಷಕಿಯರು ಅರ್ಥ ಮಾಡಿಕೊಳ್ಳಬೇಕು. ಕೊಟ್ಟಿರುವ ಚಟುವಟಿಕೆಗಳು ಪಠ್ಯಕ್ರಮದ ಗುರಿಗಳ ಜೊತೆ ಬುನಾದಿ ಹಂತದ ಸಾಮರ್ಥ್ಯಗಳು ಹೊಂದಾಣಿಕೆ ಆಗುತ್ತಿದೆಯೇ, ಎಂಬುದನ್ನು ಅರಿಯಬೇಕು. ಮಕ್ಕಳ ವೈವಿಧ್ಯಮಯ ಅಗತ್ಯಗಳನ್ನು ಪೂರೈಸುವ ಕಲಿಕೆಯ ಯೋಜನೆ ಮಾಡಬೇಕು. ಈ ಕಲಿಕೆಯ ಯೋಜನೆಯಲ್ಲಿ ಶಿಕ್ಷಕರು ಸಕ್ರಿಯ ವೀಕ್ಷಕರಾಗಿದ್ದು ಮಕ್ಕಳ ಕಲಿಕೆಯನ್ನು ಗುರುತಿಸಬೇಕು. ಎಲ್ಲಾ ಪಠ್ಯಕ್ರಮದ ಗುರಿಗಳ ಅಡಿಯಲ್ಲಿ ಗುರುತಿಸಲಾದ ಸಾಮರ್ಥ್ಯಗಳ ಅಭಿವೃದ್ಧಿಯತ್ತ ಅವರ ಹರಿವನ್ನು ಗಮನಿಸಬೇಕು . ನಮ್ಮ ಶಿಕ್ಷಣವನ್ನು ನುಡಿಯಲ್ಲೂ ಭಾವನೆಯಲ್ಲೂ ಸಾಮರ್ಥ್ಯ ಆಧಾರಿತ ಮಾಡಬೇಕಿದ್ದರೆ, ಪ್ರತಿಯೊಂದು ಅಧ್ಯಾಯದಲ್ಲಿ ಕೊಟ್ಟಿರುವ ಕಲಿಕೆಯ ಫಲಿತಾಂಶಗಳು ಮತ್ತು

ಚಟುವಟಿಕೆಗಳ ನಕಾಶೆಯನ್ನು ಸಿದ್ಧ ಪಡಿಸಬೇಕು .

ಈ ಪಠ್ಯಪುಸ್ತಕದಲ್ಲಿ ಕೊಟ್ಟಿರುವ ಚಟುವಟಿಕೆಗಳು ಕೇವಲ ಸೂಚಕವಾದದ್ದು. ಶಿಕ್ಷಕರು ತಮ್ಮದೇ ಆದ ಚಟುವಟಿಕೆಗಳನ್ನು ರೂಪಿಸಬಹುದು. ಮಗುವಿನ ನಿಕಟ ಪರಿಸರದಲ್ಲಿ ಲಭ್ಯವಿರುವ ಭೌತಿಕ ಸ್ಥಳೀಯ ಆಟಿಕೆಗಳು ಮತ್ತು ಕ್ರೀಡೆಗಳನ್ನು ಇದಕ್ಕೆ ಪೂರಕವಾಗಿ ಬಳಸಿ ಆಡುತ್ತ ಕಲಿಯುವ ವಾತಾವರಣ ಬೆಳೆಸ ಬಹುದು. ಈ ವಯಸ್ಸಿನ ಮಕ್ಕಳ ಸಾಮರ್ಥ್ಯದ ಉದ್ದೇಶಿತ ಬೆಳವಣಿಗೆಯ ಗುರಿಗೆ ಚ್ಯುತಿ ಬರದಂತೆ ಸಂದರ್ಭ ಮತ್ತು ಸನ್ನಿವೇಶಕ್ಕೆ ತಕ್ಕಂತೆ ಚಟುವಟಿಕೆಗಳಿಗೆ ಹೊಂದಿಕೊಳ್ಳಲು, ಅಳವಡಿಸಿಕೊಳ್ಳಲು, ಮಾರ್ಪಡಿಸಲು ಶಿಕ್ಷಕರಿಗೆ ಪೂರ್ಣ ಸ್ವಾತಂತ್ರ್ಯ ಇದೆ.

ಬೌದ್ಧಿಕ ಸವಾಲುಗಳು, ಮತ್ತು ಅಭಿಪ್ರಾಯ ಪ್ರಚೋದಕ ಕೆಲಸಗಳಲ್ಲಿ ತಲ್ಲೀನವಾದರೆ ಅದು ವಿಮರ್ಶಾತ್ಮಕ ಮತ್ತು ಗಣಿತಜ್ಞತೆಯ ಕಲಿಕೆಯನ್ನು ಚೆನ್ನಾಗಿ ಕಲಿಯುವಂತೆ ಮಾಡುತ್ತದೆ . ಮಕ್ಕಳ ಸಾಂಪ್ರದಾಯಿಕ ಕಲಿಕೆಯ ಜೊತೆಗೆ ಮೆದುಳಿಗೆ ಕಸರತ್ತು ನೀಡುವ ಸಮಸ್ಯೆಗಳು ಒಗಟುಗಳನ್ನು ಬಿಡಿಸಲು ಇಲ್ಲಿ ಅವಕಾಶ ನೀಡಲಾಗಿದೆ. ಮಕ್ಕಳ ವಯಸ್ಸಿಗೆ ತಕ್ಕ ಅನೇಕ ಒಗಟುಗಳನ್ನು ನೀಡಲಾಗಿದೆ. ಇವುಗಳನ್ನು ಬಿಡಿಸುತ್ತ ಕಡೆ ಪಕ್ಷ ಒಂದು ವಾರವಾದರೂ ಸಮಯ ಕಳೆಯುವಷ್ಟಿದೆ. ಅನೇಕ ಬಾರಿ ಕೆಲವು ಸಮಸ್ಯೆಗಳಿಗೆ ಒಂದಕ್ಕಿಂತ ಹೆಚ್ಚಿನ ಉತ್ತರಗಳು ಇರಲು ಸಾಧ್ಯ . ಜೊತೆಗೆ, ಈ ಸಮಸ್ಯೆಗಳನ್ನು ಮನರಂಜನೆಗಾಗಿ ನೀಡಲಾಗಿದೆ, ಹೀಗಾಗಿ ಮಕ್ಕಳನ್ನು ಒಗಟುಬಿಡಿಸುವ ಕ್ಷಮತೆಯ ಮೂಲಕ ಅವರ ಬುದ್ಧಿಮತ್ತೆಯನ್ನು ಅಳೆಯಬಾರದು.

ಈ ಪುಸ್ತಕದ ಅಧ್ಯಾಯಗಳಿಗೆ ವಾಕ್-ದೃಶ್ಯ ನೆರವುಗಳನ್ನು , ಈ- ಸಾಮಗ್ರಿಯನ್ನು , QR ಕೋಡಿನಲ್ಲಿ ಪುಸ್ತಕದ ಉದ್ದಕ್ಕೂ ಒದಗಿಸಿರುವ ಚಟುವಟಿಕೆಗಳನ್ನು, ಮತ್ತು NCERT ಅಭಿವೃದ್ಧಿ ಪಡಿಸಿರುವ ಇತರ ಕಲಿಕಾ- ಬೋಧಕ ಕಿಟ್ ಗಳನ್ನು ಬಳಸಿ ಕಲಿಕೆಯನ್ನು ಹೆಚ್ಚು ಶ್ರೀಮಂತ ಗೊಳಿಸಬೇಕು.

ಕಲಿಕೆಯ ಏಕೈಕ ಮೂಲ ಈ ಪಠ್ಯ ಪುಸ್ತಕವಲ್ಲ . ಮಕ್ಕಳು ಪರಿಸರವನ್ನು ಗಮನಿಸುತ್ತಾ ಸಾಕಷ್ಟು ಕಲಿಯುತ್ತಾರೆ. ತಮ್ಮ ವಯಸ್ಸಿನ ಮಕ್ಕಳೊಂದಿಗೆ, ಅಜ್ಜಿ ತಾತಂದಿರು ಸೇರಿದಂತೆ ಹಿರಿಯರೊಂದಿಗೆ, ಅವರ ಇಷ್ಟದ ವಸ್ತುಗಳನ್ನು ಮಾಡುತ್ತ, ಟಿವಿ. ನೋಡುತ್ತಾ, ಆಟಿಕೆಗಳು ಮತ್ತು ಫೋನಿನಲ್ಲಿ ಆಡುತ್ತಾ , ಕಥೆ, ಕವನ, ಕೇಳುತ್ತ, ನಿಯೋಜನೆಗಳನ್ನು ಮಾಡುತ್ತ, ಪ್ರಯಾಣ ಮಾಡುತ್ತಾ, ಐತಿಹಾಸಿಕ ಸ್ಥಳಗಳಿಗೆ ಭೇಟಿನೀಡುತ್ತಾ ಕಲಿಯುತ್ತಾರೆ. ಹೀಗಾಗಿ ಪೋಷಕರಾಗಿ, ಶಿಕ್ಷಕರಾಗಿ, ನಾವು ಪಠ್ಯಪುಸ್ತಕದ ಆಚೆ ಹೋಗಿ, ಮಕ್ಕಳು ಕಲಿತಿರುವ ಈ ಅರಿವಿಗೆ ಮನ್ನಣೆ ನೀಡಿ, ಈ ಹಂತಕ್ಕೆ ಗುರುತಿಸಲಾಗಿರುವ ಶೈಕ್ಷಣಿಕ ಗುರಿಯೊಂದಿಗೆ ಅವರ ಸಾಮರ್ಥ್ಯಗಳ ನಕ್ಷೆ ರೂಪಿಸಬೇಕು. ನಮ್ಮ ಮಕ್ಕಳ ಶಿಕ್ಷಣವನ್ನು ನಮ್ಮೆಲ್ಲರ ಸಂಘಟಿತ ಜವಾಬ್ದಾರಿ ಎಂದು ಪರಿಗಣಿಸಬೇಕು.

© NCERT not to be republished

# ಆಭಿವೃದ್ಧಿ ಗಂಕ

**ಸಲಹೆಗಾಉಉ**

ಸಲಹೆಗಾರರು ದಿನೇಶ್ ಪ್ರಸಾದ್ ಸಕ್ಲಾನಿ, ನಿರ್ದೇಶಕರು ಎನ್.ಸಿ.ಇ.ಆರ್.ಟಿ ನವದೆಹಲಿ

**ಶಶಿಕಲಾ ವಂಆ,**

ಪ್ರೊಫೆಸರ್ (ನಿವೃತ್ತ).) ಮತ್ತು ಕುಲಪತಿ – ಎಸ್.ಎನ್.ಡಿ.ಟಿ ಮಹಿಳಾ ವಿಶ್ವವಿದ್ಯಾಲಯ, ಮುಂಬೈ (ಅಧ್ಯಕ್ಷರು, ಪಠ್ಯಕ್ರಮ ಮತ್ತು ಕಲಿಕೆ–ಬೋಧನಾ ಸಾಮಗ್ರಿ ಅಭಿವೃದ್ಧಿ ಸಮಿತಿ) ಸುನೀತಿ ಸನ್ವಾಲ್, ಪ್ರೊಫೆಸರ್ ಮತ್ತು ತಲೆ, ಪ್ರಾಥಮಿಕ ಶಿಕ್ಷಣ ಇಲಾಖೆ, ಎನ್ ಸಿಇಆರ್ ಟಿ, ನವದೆಹಲಿಸದಸ್ಯ ಸಂಚಾಲಕ, ಪಠ್ಯಕ್ರಮ ಮತ್ತು ಕಲಿಕೆ–ಬೋಧನಾ ಸಾಮಗ್ರಿ ಅಭಿವೃದ್ಧಿ ಸಮಿತಿ)

**ಕೊಡುಗಚಾಉಉ,**

ಆಸ್ತಾ ಭಯಾನಾ, ಪ್ರಾಥಮಿಕ ಶಿಕ್ಷಕ, ಎಂಆರ್ ಜಿ ಶಾಲೆ, ನವದೆಹಲಿ

ಅನೂಪ್ ಕುಮಾರ್ ರಜಪೂತ್, ಪ್ರೊಫೆಸರ್, ಆಇಇಮತ್ತು ತಲೆ ಪ್ರಕಾಶನ ವಿಭಾಗ, ಎನ್ಸಿಇಆರ್ಟಿ, ನವದೆಹಲಿ

ಅಶುತೋಷ್ ಕೇದಾರನಾಥ್ ವಜಲ್ವಾರ್, ಪ್ರೊಫೆಸರ್, ಡಿಇಎಸ್ಎಂ, ಎನ್ಸಿಇಆರ್ಟಿ, ನವದೆಹಲಿ

ಗರಿಮಾ ಪಾಂಡೆ, ಪ್ರಾಥಮಿಕ ಶಿಕ್ಷಕ, ಎಂಸಿಡಿ ಶಾಲೆ, ನವದೆಹಲಿ

ಗುಂಜನ್ ಖುರಾನಾ, ಸಂಶೋಧನಾ ವಿದ್ವಾಂಸ, ಜಾಮಿಯಾ ಮಿಲಿಯಾ ಇಸ್ಲಾಮಿಯಾ, ನವದೆಹಲಿ

ಮುಕುಂದ್ ಕುಮಾರ್ ಝಾ, ಸಲಹೆಗಾರ, ಡಿಇಇ, ಎನ್ ಸಿಇಆರ್ ಟಿ, ನವದೆಹಲಿ

ನಿಶಾ ನೇಗಿ ಸಿಂಗ್, ಹಿರಿಯ ಸಲಹೆಗಾರ, ಆಇಇ,ಎನ್ ಸಿಇಆರ್ ಟಿ, ನವದೆಹಲಿ

ಪಾರ್ವತಿ ಭಟ್, ಎನ್. ತಾಂತ್ರಿಕ ಸಹಾಯಕ, ಡಿಎಸ್ಇಆರ್ಟಿ, ಬೆಂಗಳೂರು

ಪದ್ಮಪ್ರಿಯಾ ಶಿರಾಲಿ, ಪ್ರಾಂಶುಪಾಲರು, ಸಹ್ಯಾದ್ರಿ ಶಾಲೆ, ಪುಣೆ

ರಿತು ಗಿರಿ, ಸಹಾಯಕ ಶಿಕ್ಷಕ, ಶಿಕ್ಷಣ ನಿರ್ದೇಶನಾಲಯ, ದೆಹಲಿ ಸಪ್ನಾ ಅರೋರಾ, ಖಉಖ, ಶಿಕ್ಷಣ ನಿರ್ದೇಶನಾಲಯ, ದೆಹಲಿ

**ವಿಮಶ್ಚಕಉ**

ದಿವ್ಯಾಂಶು ದವೆ, ಕುಲಪತಿ (ಉಸ್ತುವಾರಿ), ಮಕ್ಕಳ ವಿಶ್ವವಿದ್ಯಾಲಯ, ಗಾಂಧಿನಗರ

ಗಜಾನನ್ ಲೋಂಧೆ, ನಿರ್ದೇಶಕರು ಸಂವಿತ್ ರಿಸರ್ಚ್ ಫೌಂಡೇಶನ್, ಬೆಂಗಳೂರು

ಮಂಜುಲ್ ಭಾರ್ಗವ, ಸದಸ್ಯ, ರಾಷ್ಟ್ರೀಯ ಸಂಚಾಲನಾ ಸಮಿತಿ ಮತ್ತು

ಅಧ್ಯಕ್ಷರು, ಮ್ಯಾಂಡೇಟ್ ಗ್ರೂಪ್

ಸಂದೀಪ್ ದಿವಾಕರ್, ವಿಷಯ ತಜ್ಞ– ಅಜೀಂ ಪ್ರೇಮ್ಜಿ ಫೌಂಡೇಶನ್

ಶ್ರೀಧರ್ ಶ್ರೀವಾಸ್ತವ, ಪ್ರೊಫೆಸರ್ ಮತ್ತು ಜಂಟಿ ನಿರ್ದೇಶಕರು, ಎನ್ ಸಿಇಆರ್ ಟಿ, ನವದೆಹಲಿ

**ಶುಕಾಷೀಕ ಸಂಂಶೋಆಕಉ**

ಅನೂಪ್ ಕುಮಾರ್ ರಜಪೂತ್, ಪ್ರೊಫೆಸರ್, ಡಿಇಇ ಮತ್ತು ಮುಖ್ಯ ಪ್ರಕಾಶನ ವಿಭಾಗ,

ಎನ್ ಸಿಇಆರ್ ಟಿ, ನವದೆಹಲಿ

© NCERT not to be republished

# ಸ್ವೀಕೃತಿಗಳು

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್ಸಿಇಆರ್ಟಿ) ಅನಿತಾ ಶರ್ಮಾ ಅವರ ಅಮೂಲ್ಯ ಕೊಡುಗೆಗಳನ್ನು ಗುರುತಿಸುತ್ತದೆ, ಪ್ರಾಂಶುಪಾಲರು, ಎಸ್ ಡಿ ಪಬ್ಲಿಕ್ ಶಾಲೆ; ಹಿಮಾನಿ ಡೆಮ್, ಸಹಾಯಕ ಪ್ರಾಧ್ಯಾಪಕ, ರಾಜಧಾನಿ ಕಾಲೇಜು, ದೆಹಲಿ ವಿಶ್ವವಿದ್ಯಾಲಯ; ಮನೀಶ್ ಜೈನ್, ಪ್ರೊಫೆಸರ್, ಐಐಟಿ ಗಾಂಧಿ ನಗರ; ಪಂಕಜ್ ತಿವಾರಿ, ಜನ ಶಿಕಾಶಕ್, ಎಂಎಲ್ಬಿ ಶಾಲೆ ಸಿಯೋನಿ, ಮಧ್ಯಪ್ರದೇಶ; ಪ್ರೀತಿ ಹೆಗ್ಡೆ, ಸಹಾಯಕ ಶಿಕ್ಷಕ, ಕೆಪಿಎಸ್, ಹೆಗ್ಗನಹಳ್ಳಿ, ಬೆಂಗಳೂರು; ಪುಷ್ಪಾ ಓಲ್ಯಾನ್, ಖಖಂ, ಡಿಇಇ, ಎನ್ಸಿಇಆರ್ಟಿ; ರಾಬಿನ್ ಛೆಟ್ರಿ, ನಿರ್ದೇಶಕ, ಖಅಇಖಖಿ, ಸಿಕ್ಕಿಂ; ರಾಕೇಶ್ ಭಾಟಿಯಾ, ವಿಷಯ ತಜ್ಞ, ಊಃಖಇ, ಹರಿಯಾಣ; ರೇಮನ್ ಹೂಡಾ, .ಎಕಈ ಡಿಇಇ, ಎನ್ಸಿಇಆರ್ಟಿ; ಸಾರಾ ರಫತ್ ಖಾನ್, .ಎಕಈ ಡಿಇಇ, ಎನ್ಸಿಇಆರ್ಟಿ; ತೇಜಲ್ ಅಹುಜಾ, .ಎಕಈ ಡಿಇಇ, ಎನ್ಸಿಇಆರ್ಟಿ; ಮತ್ತು ವೀಣಾ ಎಚ್ ಆರ್, ಶಿಕ್ಷಕ ಶಿಕ್ಷಣತಜ್ಞಪುಸ್ತಕ ಅಭಿವೃದ್ಧಿ ಕಾರ್ಯಾಗಾರಗಳಲ್ಲಿ ಚರ್ಚೆಗಳಲ್ಲಿ ಭಾಗವಹಿಸಲು, ಸಂವಿತ್ ರಿಸರ್ಚ್ ಫೌಂಡೇಶನ್, ಬೆಂಗಳೂರು.

ಸಂತೋಷ್ ಮಿಶ್ರಾ ಅವರ ಪ್ರಯತ್ನಗಳನ್ನು ಕೌನ್ಸಿಲ್ ಶ್ಲಾಘಿಸುತ್ತದೆ, ಕಲಾವಿದ, ಈ ಪಠ್ಯಪುಸ್ತಕದ ವಿವರಣೆಗಳು, ವಿನ್ಯಾಸ ಮತ್ತು ವಿನ್ಯಾಸಕ್ಕಾಗಿ ದೆಹಲಿಯ ಏಮ್ಸ್. ಡಿಟಿಪಿ ಆಪರೇಟರ್ಗಳಾದ ಅರುಣ್ ವರ್ಮಾ, ಡಿಇಎಸ್ಎಂ, ಕನಿಕಾ ವಾಲೆಚಾ, ಡಿಇಇ, ರೋಹಿತ್ ಕುಮಾರ್, ಡಿಇಇ ಮತ್ತು ರಾಕೇಶ್ ಅಗರ್ವಾಲ್ ಅವರ ಕೊಡುಗೆಗಳನ್ನು ಎನ್ಸಿಇಆರ್ಟಿ ಕೃತಜ್ಞತೆಯಿಂದ ಗುರುತಿಸುತ್ತದೆ. ಸಹಾಯಕ, ಡಿಇಇ, ಎನ್ ಸಿಇಆರ್ ಟಿ.

ಇಲ್ಮಾ ನಾಸಿರ್ ಅವರ ಪ್ರಯತ್ನಗಳು, ಸಂಪಾದಕ (ಗುತ್ತಿಗೆ), ಪ್ರಕಾಶನ ವಿಭಾಗ, ಎನ್ ಸಿಇಆರ್ ಟಿ ಈ ಪಠ್ಯಪುಸ್ತಕವನ್ನು ಸಂಪಾದಿಸಿದ್ದಕ್ಕಾಗಿ ಶ್ಲಾಘಿಸಲಾಗಿದೆ. ಕೌನ್ಸಿಲ್ ಪವನ್ ಕುಮಾರ್ ಬ್ಯಾರಿಯಾರ್ ಅವರಿಗೆ ಕೃತಜ್ಞವಾಗಿದೆ, ಉಸ್ತುವಾರಿ, ಡಿಟಿಪಿ ಸೆಲ್, ಮತ್ತು ಸಂಜೀವ್ ಕುಮಾರ್, ನಕಲಿಸು ಹೋಲ್ಡರ್, ಪ್ರಕಾಶನ ವಿಭಾಗ, ಎನ್ ಸಿಇಆರ್ ಟಿ.

© NCERT not to be republished

# ಪರಿವಿಡಿ


ಮುನ್ನುಡಿ *iii*

ಈ ಪುಸ್ತಕದ ಬಗ್ಗೆ *vii*

1. ಜೂಲು ಬೆಕ್ಕಿನ ಹುಡುಕಾಟ! (ಸಂಖ್ಯಾ-ಪೂರ್ವ ಪರಿಕಲ್ಪನೆಗಳು) 1
2. ಯಾವುದು ಉದ್ದ? ಯಾವುದು ಗುಂಡು? (ಆಕಾರಗಳು) 10
3. ಮಾವಿನ ಔತಣ (1 ರಿಂದ 8 ಸಂಖ್ಯೆಗಳು) 18
4. ಹತ್ತನ್ನು ಮಾಡುವುದು (10 ರಿಂದ 20 ಸಂಖ್ಯೆಗಳು) 33
5. ಎಷ್ಟು? (ಬಿಡಿ ಸಂಖ್ಯೆಗಳನ್ನು ಕೂಡುವುದು ಮತ್ತು ಕಳೆಯುವುದು) 48
6. ತರಕಾರಿ ತೋಟ (20ರ ವರೆಗೆ ಕೂಡುವುದು ಮತ್ತು ಕಳೆಯುವುದು) 64
7. ಕಾವೇರಿಯ ಪರಿವಾರ (ಮಾಪನ) 72
8. ಸಂಖ್ಯಾ ವಿನೋದ (21 ರಿಂದ 99 ವರೆಗಿನ ಸಂಖ್ಯೆಗಳು) 84
9. ಉತ್ಸವ (ನಮೂನೆಗಳು) 98
10. ನನ್ನ ದಿನವನ್ನು ಹೇಗೆ ಕಳೆಯುತ್ತೇನೆ? (ಸಮಯ) 105
11. ಎಷ್ಟು ಬಾರಿ? (ಗುಣಾಕಾರ) 111
12. ನಾವು ಎಷ್ಟು ಖರ್ಚು ಮಾಡಬಹುದು? (ಹಣ) 115
13. ಎಷ್ಟೊಂದು ಆಟಿಕೆಗಳು! 120

ಒಗಟುಗಳು 122


© NCERT not to be republished




© NCERT not to be republished



# 1 ಜೂಲು ಬೆಕ್ಕಿನ ಹುಡುಕಾಟ!

## ಹಾಡೋಣ

ಹುಡುಕುತ್ತಾ ಹುಡುಕುತ್ತಾ ಹುಡುಕುತ್ತಾ
ಹುಡುಕುತ್ತಲಿರುವೆ ನನ್ನ ಜೂಲು ಬೆಕ್ಕನ್ನು



ಸಜ್ಜೆಯ **ಮೇಲೆ**
ಹೆಜ್ಜೆಯನಿಟ್ಟೆಯ?



ಮಂಚದ **ಕೆಳಗೆ** ಮಲಗೇ
ಬಿಟ್ಟೆಯ?
ಎಲ್ಲಿಹೆ ನನ್ನ ಮುದ್ದು
ಪುಟಾಣಿ?



ಹುಡುಕುತ್ತಾ ಹುಡುಕುತ್ತಾ ಹುಡುಕುತ್ತಾ
ಹುಡುಕುತ್ತಲಿರುವೆ ನನ್ನ
ಜೂಲು ಬೆಕ್ಕನ್ನು
ನನ್ನಯ ಚೀಲದ **ಒಳಗಡೆ**
ಇಹೆಯಾ?



ಇರುವೆಯ ನೀನು **ಕಪಾಟಿನ**
ಹೊರಗಡೆ?
ಎಲ್ಲಿಹೆ ನನ್ನ ಜೂಲು
ಬೆಕ್ಕೆ?



ಬಾರಲೇ, ಬಾರಲೇ
ನನ್ನೆಡೆ ಬಾರೆ !
ಕಂಡೇ ಬಿಟ್ಟೆ ಜೂಲು ಬೆಕ್ಕೆ!
ಜಡಿಯ **ತಳವನು**
ಗೀಚುತ ನಿಂದೆ
ಬಾರಲೇ, ಬಾರಲೇ
ನನ್ನೆಡೆ ಬಾರೆ !







ಕಾರಿನ **ತುದಿಯಲ್ಲಿ** ಕುಣಿಯುತ ನಿಂದೆ
ಟೋಪಿಯ **ಮೇಲೆ** ಪುಟಿಯುತ ನಿಂತೆ

ನನ್ನೆಡೆ ಬಾರೆ ಜೂಲು ಬೆಕ್ಕೆ
ಚಾಪೆಯ ಅಡಿಯಲ್ಲಿ ಅಡಗಿಹೆ ಕಂಡೆ
ಬಂದ ಇಲ್ಲಿ ಜೂಲು ಬೆಕ್ಕು!

ಪದ್ಯವನ್ನು ಗಟ್ಟಿಯಾಗಿ ಓದಿರಿ ಇದನ್ನು ಪಠಿಸುತ್ತಾ ಅಭಿನಯಿಸಲು ಮಕ್ಕಳಿಗೆ ಹೇಳಿ. ಮಕ್ಕಳಿಗೆ ಚಿತ್ರವನ್ನು ನೋಡಿ ಅವರು ಏನನ್ನು ಗಮನಿಸುತ್ತಾರೋ ಅದನ್ನು ವಿವರಿಸಲು ಹೇಳಿ. ಮೇಲೆ, ಕೆಳಗೆ,ಒಳಗಡೆ, ಹೊರಗಡೆ, ತುದಿಯಲ್ಲಿ, ಅಡಿಯಲ್ಲಿ ಏನಿದೆ ಎಂದು ಗಮನಿಸಿ ಹೇಳಲಿ. ತಮ್ಮ ಸುತ್ತ ಕಾಣುವ ಪ್ರಾಣಿ ಪಕ್ಷಿಗಳ ಬಗ್ಗೆ ಮಾತನಾಡಲು ಉತ್ತೇಜಿಸಿ.

## ಪದ್ಯದ ಚಿತ್ರವನ್ನು ಗಮನಿಸಿ ಸೂಕ್ತ ಪದವನ್ನು ಸುತ್ತುಗಟ್ಟಿ

A. ಕೆಂಪು ಚೆಂಡು ಮಂಚದ **ಮೇಲಿದೆ / ಕೆಳಗಿದೆ / ಬಳಿ** ಇದೆ.

B. ಬೆಕ್ಕು ಕಾರಿನ **ಒಳಗಿದೆ/ ಹೊರಗಿದೆ /ಮೇಲಿದೆ**.

C. ವ್ಯಕ್ತಿಯು ಮರದ **ಕೆಳಗೆ/ ಮೇಲೆ /ಒಳಗೆ** ಮಲಗಿದ್ದಾನೆ.

D. ಹಸು ಮನೆಯ **ಒಳಗಿದೆ / ಮೇಲಿದೆ /ಹೊರಗಿದೆ**.



## ಯೋಚಿಸಿ ಉತ್ತರಿಸು:

A. ನಿಮ್ಮ ಚಪ್ಪಲಿಯನ್ನು ಎಲ್ಲಿ ಇಡುತ್ತೀರ? ಕೋಣೆಯ ಒಳಗೆ / ಹೊರಗೆ

B. ಕಸವನ್ನು ಎಲ್ಲಿ ಬಿಸಾಡುತ್ತೀರ? ಕಸದ ಬುಟ್ಟಿಯ ಒಳಗೆ / ಹೊರಗೆ



## ಆಡೋಣ ಬಾ ಹುಡುಕೋಣ ಬಾ

ಮಕ್ಕಳು ಎರಡು ತಂಡಗಳಾಗಿ ವಿಭಾಗವಾಗಲಿ. ಒಂದು ತಂಡವು ಸೀಮೆಯ ಸುಣ್ಣ, ಕೆಂಪು ಚೆಂಡು, ಇಂತಹ ವಸ್ತುಗಳನ್ನು ಬಚ್ಚಿಡಲಿ. ಇನ್ನೊಂದು ತಂಡಕ್ಕೆ ಅವುಗಳನ್ನು ಹುಡುಕಲು ಹೇಳಿ. ಹುಡುಕಲು ಸುಲಭವಾಗುವಂತೆ ಮಕ್ಕಳು ಪದಗಳಲ್ಲಿ ನಿರ್ದೇಶನ ನೀಡಬೇಕು. ಮೇಲೆ, ಕೆಳಗೆ, ಪಕ್ಕದಲ್ಲಿ, ಒಳಗೆ, ಹೊರಗೆ ಇಂತಹ ಸ್ಥಳ ಸಂಕೇತದ ಪದಗಳನ್ನು ಬಳಸಿ.

ಉದಾಹರಣೆಗೆ :

- ಕಪ್ಪು ಹಲಗೆಯ **ಹತ್ತಿರ** ಮೇಜಿನ **ಕೆಳಗೆ** ಯಾವುದೋ ಒಂದು ಬಿಳಿಯ ವಸ್ತು ಇದೆ ಹುಡುಕು.
- ತರಗತಿಯ **ಹೊರಗೆ** ಮರದ **ಕೆಳಗೆ** ಇರುವ ಕೆಂಪು ವಸ್ತುವನ್ನು ಹುಡುಕು.

© NCERT not to be republished

## ಚೆಂಡು ಎಸೆಯುವ ಆಟ ಆಡೋಣ

ಪ್ರತಿ ವಿದ್ಯಾರ್ಥಿಯು ಸ್ವಲ್ಪ ದೂರದಿಂದ ಗುರಿ ಇಟ್ಟು ಚೆಂಡನ್ನು ಒಂದು ಬುಟ್ಟಿಯಲ್ಲಿ ಎಸೆಯಬೇಕು. ಚೆಂಡು ಬುಟ್ಟಿಯಲ್ಲಿ ಬಿದ್ದರೆ ಉಳಿದ ಮಕ್ಕಳು **'ಒಳಗೆ'** ಎಂದು ಹೇಳಬೇಕು. ಬುಟ್ಟಿಯ ಹೊರಗೆ ಚೆಂಡು ಬಿದ್ದರೆ, **'ಹೊರಗೆ'** ಎಂದು ಹೇಳಬೇಕು.



© NCERT not to be republished

## ಮಾಡೋಣ ಬಾ

A. ಚಿತ್ರದಲ್ಲಿ ಒಳಗೆ ಇರುವ ವಸ್ತುಗಳಿಗೆ ಸರಿ ಗುರುತು ✓ ಹಾಕಿ.





ಅವರ ವಿವಿಧ ಸಾಮರ್ಥ್ಯಗಳು ಏನೇ ಇದ್ದರೂ ಎಲ್ಲ ಮಕ್ಕಳು ಪಾಲ್ಗೊಳ್ಳುವಂತೆ ಚಟುವಟಿಕೆಯನ್ನು ನಡೆಸಬೇಕು. ಉದಾಹರಣೆಗೆ : ಚಂಡಿಗೆ ಗೆಜ್ಜೆ ಕಟ್ಟಿ ಬುಟ್ಟಿಯ ಒಳಭಾಗವನ್ನು ಬುಟ್ಟಿಯ ಹೊರ ಭಾಗಕ್ಕಿಂತ ಭಿನ್ನವಾಗಿರುವಂತೆ ಮಾಡಿದರೆ ಶಬ್ದದಲ್ಲಿ ಚೆಂಡು ಒಳಗೆ ಬಿದ್ದಿದೆಯೋ ಹೊರಗೆ ಇದೆಯೋ ಎಂದು ತಿಳಿಯುತ್ತದೆ.

B. ಹೊರಗೆ ಇರುವ ವಸ್ತುಗಳಿಗೆ ಸರಿ ಗುರುತು ✓ ಹಾಕಿ





C. ಚಿತ್ರ ನೋಡಿ ಸರಿಯಾದ ಪದಕ್ಕೆ ಸರಿ ಗುರುತು ✓ ಹಾಕಿ

i. ಹುಡುಗನು ಮರದ **ಮೇಲೆ** / **ಕೆಳಗೆ** ಕುಳಿತಿದ್ದಾನೆ

ii. ಹಕ್ಕಿಗಳು ಮರದ **ಮೇಲೆ** / **ಕೆಳಗೆ** ಇವೆ



D. ಕೆಳಗಿನ ಚಿತ್ರದಲ್ಲಿ ಕಣ್ಣಿನ ಮೇಲಕ್ಕೆ ಹುಬ್ಬುಗಳನ್ನು ಮೂಗಿನ ಕೆಳಗೆ ನಗುತ್ತಿರುವ ಬಾಯನ್ನು ಬರೆಯಿರಿ.



© NCERT not to be republished

E. ತ್ರಿವರ್ಣ ಧ್ವಜ ಎಂದು ಕರೆಯುವ ನಮ್ಮ ರಾಷ್ಟ್ರಧ್ವಜವನ್ನು ನೋಡಿ ಅದರಲ್ಲಿ ಎಷ್ಟು ಬಣ್ಣಗಳಿವೆ?

ಸರಿಯಾದ ಉತ್ತರಕ್ಕೆ ಸರಿ ಗುರುತು ✓ ಹಾಕಿ.

i. ಧ್ವಜದ **ಮೇಲುಗಡೆ** ಯಾವ ಬಣ್ಣ ಇದೆ?

**ಬಿಳಿ/ ಕೇಸರಿ/ಹಸಿರು**

ii. ಬಿಳಿಯ ಬಣ್ಣದ **ಕೆಳಗೆ** ಯಾವ ಬಣ್ಣವಿದೆ?

**ಕೆಂಪು/ ಕೇಸರಿ /ಹಸಿರು**

iii. ಹಸಿರು ಬಣ್ಣದ ಮೇಲಿರುವ **ಬಣ್ಣ** ಯಾವುದು?

**ಬಿಳಿ/ ಕೇಸರಿ/ಹಳದಿ**

iv. ಅಶೋಕ ಚಕ್ರವು ಧ್ವಜದ ಎಲ್ಲಿದೆ ?

**ಮೂಲೆಯಲ್ಲಿ / ಮಧ್ಯದಲ್ಲಿ / ಪಕ್ಕದಲ್ಲಿ**



ಎಲ್ಲಿ ಯಾವಾಗ ಮತ್ತು ಏಕೆ ನಾವು ರಾಷ್ಟ್ರಧ್ವಜವನ್ನು ಏರಿಸುತ್ತೇವೆ ಎಂದು ಮಕ್ಕಳೊಂದಿಗೆ ಚರ್ಚಿಸಿ, ರಾಷ್ಟ್ರೀಯ ಹಬ್ಬಗಳ ಬಗ್ಗೆ ಮಕ್ಕಳು ತಮ್ಮ ಭಾವನೆಗಳನ್ನು ತಿಳಿಸಲಿ ಮಕ್ಕಳಿಗೆ ತಾವೇ ರಾಷ್ಟ್ರಧ್ವಜವನ್ನು ಮಾಡಲು ಹೇಳಿ ಹಾಗೂ ಅದರ ಮುಂದೆ ನಿಂತು ರಾಷ್ಟ್ರಗೀತೆಯನ್ನು ಹಾಡಲು ಹೇಳಿ.



© NCERT not to be republished

## ಚುಕುಬುಕು ಚುಕುಬುಕು ಹೊರಟಿತು ರೈಲು!

ಚುಕುಬುಕು! ಚುಕುಬುಕು!
ಹೊರಟಿತು ರೈಲು.
ಬೆಟ್ಟ ಹತ್ತಿ ಕಣಿವೆ ಇಳಿದು
ಚುಕುಬುಕು! ಚುಕುಬುಕು!
ಹೊರಟಿತು ರೈಲು.
ನನ್ನಯ ಬೋಗಿಯ ಮುಂದಿದೆ ಬೋಗಿ
ನನ್ನಯ ಬೋಗಿಯ ಹಿಂದಿದೆ ಬೋಗಿ
ಎಲ್ಲರು ಸೇರಿ ಸರಪಳಿಯಾಗಿ
ಬೆಟ್ಟ ಹತ್ತಿ ಕಣಿವೆ ಇಳಿದು
ಚುಕುಬುಕು ಚುಕುಬುಕು
ಹೊರಟಿತು ರೈಲು



© NCERT not to be republished

A. ಎಂಜಿನ್ ನಂತರ ಎಷ್ಟು ಭೋಗಿಗಳು ಇವೆ?

B. ಕೆಂಪು ಭೋಗಿಯ ಮುಂದೆ ಎಷ್ಟು ಭೋಗಿಗಳು ಇವೆ?

C. ಕೆಂಪು ಭೋಗಿಯ ಹಿಂದಿನ ಭೋಗಿಗೆ ಕಿತ್ತಳೆ ಬಣ್ಣ ತುಂಬಿ.

D. ಕೆಂಪು ಭೋಗಿಯ ಮುಂದಿನ ಬೋಗಿಗೆ ನೀಲಿ ಬಣ್ಣ ತುಂಬಿ.

ಮಕ್ಕಳು ಮಾಡಿರುವ ರೈಲು ಪ್ರಯಾಣದ ಅನುಭವವನ್ನು ಹಂಚಿಕೊಳ್ಳಲು ಹೇಳಿ. ಇದುವರೆಗೆ ರೈಲು ಪ್ರಯಾಣ ಮಾಡದ ಮಕ್ಕಳು ಪ್ರಯಾಣದ ಬಗ್ಗೆ ಪ್ರಶ್ನೆಗಳನ್ನು ಕೇಳಲಿ. ರೈಲುಗಾಡಿ ಎಂದರೇನು ಎಂಬ ಬಗ್ಗೆ ಚರ್ಚೆ ನಡೆಯಲಿ. ಒಂದು ಹಾಳೆಯ ಮೇಲೆ ರೈಲು ಗಾಡಿಯ ಚಿತ್ರ ಬರೆಯಲು ಹೇಳಿ. ಅಥವಾ ಬೇಡದ ಡಬ್ಬಿಗಳನ್ನು ಬಳಸಿ ರೈಲು ಗಾಡಿಯ ಮಾದರಿಯನ್ನು ಮಾಡಲು ಹೇಳಿ.



# ಆಡೋಣ ಬಾ

ಈ ಪದ್ಯವನ್ನು ಹಾಡುತ್ತಾ ಒಂದು ಆಟವಾಡುತ್ತಾರೆ. ಒಬ್ಬೊಬ್ಬರು ತಮ್ಮ ಮುಂದಿರುವ ಮಗುವಿನ ಭುಜ ಹಿಡಿದು ಎಲ್ಲರೂ ಒಬ್ಬರ ಹಿಂದೆ ಒಬ್ಬರು ರೈಲುಗಾಡಿಯಂತೆ ರಚಿಸುತ್ತರೆ. ರೈಲು ಗಾಡಿಯಲ್ಲಿ ಪ್ರತಿಯೊಬ್ಬನು ತನ್ನ ಮುಂದೆ ಯಾರಿದ್ದಾರೆ ಹಿಂದೆ ಯಾರಿದ್ದಾರೆ ಎಂದು ಹೇಳಬೇಕು.




ರಾಜು ಮತ್ತು ರಾಧಾ ಕೆಲವು ವಸ್ತುಗಳ ಗುಂಪುಗಳನ್ನು ಮಾಡುತ್ತಿದ್ದಾರೆ.




ಬೀಜ ಎಲೆ ಮಣಿಗಳು ಇಂತಹ ವಸ್ತುಗಳನ್ನು ಜೋಡಿಸಿ ಮಕ್ಕಳು ಸಹ ಇದೇ ರೀತಿ ಚಟುವಟಿಕೆಯನ್ನು ಮಾಡಲಿ.

© NCERT not to be republished

## ಮಾಡೋಣ

ರೋಹಿಣಿ ಎಲ್ಲಾ ಗುಂಡಿಗಳನ್ನು ಮೂರು ಗುಂಪುಗಳಾಗಿ ಮಾಡಿದ್ದಾಳೆ



ರೋಹಿಣಿ ಏಕೆ ಹೀಗೆ ಗುಂಪುಗಳನ್ನು ಮಾಡಿದಳು?

ರೋಹಿಣಿಗೆ ಈ ಗುಂಡಿಗಳನ್ನು ಬೇರೆ ಬೇರೆ ರೀತಿಯ ಗುಂಪುಗಳನ್ನಾಗಿ ಮಾಡಲು ನೆರವಾಗಿ.

## ಯೋಜನಾ ಕೆಲಸ

ತರಗತಿಯ ಕಪಾಟನ್ನು ಜೋಡಿಸಲು ಮಕ್ಕಳಿಗೆ ಹೇಳಿ. ಸ್ಥಳ ಸಂಕೇತದ ಪದಗಳನ್ನು ಬಳಸಿ ವಸ್ತುಗಳನ್ನು ಕಪಾಟಿನಲ್ಲಿ ಜೋಡಿಸಲಿ. ಉದಾಹರಣೆಗೆ ಎರಡು ವಸ್ತುಗಳನ್ನು ಕೆಳಗಿನ ಗೂಡಿನಲ್ಲಿ ಹಾಕಿ ಮೇಲಿನ ಗೂಡಿನಲ್ಲಿ ಒಂದು ವಸ್ತುವನ್ನು ಹಾಕಿ ಇತ್ಯಾದಿ.

© NCERT not to be republished



# 2 ಯಾವುದು ಉದ್ದ? ಯಾವುದು ಗುಂಡು?

## ಸುತ್ತಲೂ ನೋಡು

ಎಲ್ಲಾ ಮಕ್ಕಳನ್ನು ಗುಂಡಾಗಿ ಕೂಡಲು ವಿದ್ಯಾ ಅಕ್ಕ ಹೇಳಿದರು.




ತರಗತಿಯಲ್ಲಿ ಈ ಆಟವನ್ನು ಮಕ್ಕಳಿಗೆ ಆಡಲು ಹೇಳಿ. ಪ್ರತಿ ಮಗುವು ಎರಡು ವಸ್ತುಗಳನ್ನು ಹೆಸರಿಸಲಿ - ಒಂದು ಉದ್ದ ಮತ್ತೊಂದು ದುಂಡನೆಯ ವಸ್ತು. ಪ್ರತಿ ಬಾರಿಯೂ ಅವರು ವಿಭಿನ್ನ ವಸ್ತುಗಳನ್ನು ಹೆಸರಿಸಲಿ. ಪುನರಾವರ್ತನೆಯನ್ನು ಉತ್ತೇಜಿಸಬೇಡಿ. ಉದ್ದದ ವಸ್ತುಗಳಿಗೆ ಮಕ್ಕಳು ಎತ್ತರ ಅಗಲ ಇಂತಹ ಒಂದು-ಆಯಾಮಕ್ಕೆ ಗಮನ ಕೊಡಬಹುದು. ಉದಾಹರಣೆಗೆ: ಲೋಟ - ಕೆಲವರು ಲೋಟವನ್ನು ಉದ್ದ ಎಂದು ಹೇಳಬಹುದು. ಇನ್ನು ಕೆಲವರು ಅದನ್ನು ಗುಂಡು ಎಂದು ಹೇಳಬಹುದು. ಲೋಟದ ಬಾಯಿ ಗುಂಡಗಿರುತ್ತದೆ. ಹೀಗಾಗಿ ಎರಡನ್ನು ಪರಿಗಣಿಸಿ. ಮಕ್ಕಳು ಅದು ಉದ್ದವೇ ಗುಂಡೆ ಎಂದು ತಮ್ಮ ತರ್ಕವನ್ನ ಬಳಸಿ ವಿವರಿಸಲಿ.



## ಯೋಚಿಸಿ ಮಾಡು

A. ವೃತ್ತದಲ್ಲಿ ಗುಂಡು ವಸ್ತುವನ್ನು ಚಿತ್ರಿಸು, ◯ ಚೌಕದಲ್ಲಿ ಉದ್ದ ವಸ್ತುಗಳನ್ನು ಚಿತ್ರಿಸು ▭.










© NCERT not to be republished

B. ಆಕಾರದಲ್ಲಿ ಸಾಮ್ಯತೆ ಇರುವ ವಸ್ತುಗಳನ್ನು ಹೊಂದಿಸಿ ಬರೆಯಿರಿ












© NCERT not to be republished

C. ಚೆಂಡನ್ನು  ಹೋಲುವ ಆಕಾರಕ್ಕೆ ಸರಿ ಗುರುತು  ಹಾಕಿ.







D. ಟೋಪಿಯನ್ನು ✓ ಹೋಲುವ ಆಕಾರಕ್ಕೆ ಸರಿ ಗುರುತು ಹಾಕಿ.

   

E. ಲೋಟವನ್ನು ✓ ಹೋಲುವ ಆಕಾರಕ್ಕೆ ಸರಿ ಗುರುತು  ಹಾಕಿ.

   

F. ಬೆಂಕಿ ✓ ಪೊಟ್ಟಣವನ್ನು ಹೋಲುವ ಆಕಾರಕ್ಕೆ ಸರಿ ಗುರುತು  . ಹಾಕಿ

   



## ಮಾಡೋಣ ಬಾ

ನಿನ್ನ ಸುತ್ತಮುತ್ತ ದೊರೆಯುವ ವಸ್ತುಗಳನ್ನು ಬಳಸಿ ಮನೆ, ಆಟಿಕೆ, ಗೋಪುರ, ರೋಬೋಟ್, ಬಸ್ಸು ಅಥವಾ ಬೇರೆ ಏನಾದರೂ ತಯಾರಿಸಿ. ನೀವು ಪುಸ್ತಕಗಳು, ಪೆನ್ಸಿಲ್ ಡಬ್ಬಿ, ನೀರಿನ ಬಾಟಲ್, ಉಪಯೋಗವಿಲ್ಲದ ಅಥವಾ ಹಳೆಯ ಡಬ್ಬಿಗಳು, ಹುಟ್ಟು ಹಬ್ಬದ ಟೋಪಿಗಳು, ಆಲಿಕೆ, ಇಂತಹ ವಸ್ತುಗಳನ್ನು ಬಳಸಬಹುದು.

ತರಗತಿಯ ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಭಾಗ ಮಾಡಿ ಪ್ರತಿಯೊಂದು ಗುಂಪಿಗೂ ಒಂದು ಆಕಾರವನ್ನು ನೀಡಿ ಆ ಆಕಾರವನ್ನು ಹೋಲುವ ಬಳಸಿರುವ ಅಥವಾ ಬಿಸಾಡಿರುವ ಎರಡು ಬೇರೆ ಬೇರೆ ವಸ್ತುಗಳನ್ನು ತರಲು ಹೇಳಿ ಹೀಗೆ ಸಂಗ್ರಹಿಸಿದ ಎಲ್ಲಾ ವಸ್ತುಗಳನ್ನು ತರಗತಿಯಲ್ಲಿ ಪ್ರದರ್ಶಿಸಿ ಮಕ್ಕಳು ತಾವು ಏಕೆ ಆ ವಸ್ತುವನ್ನು ಆಯ್ದುಕೊಂಡರು ಎಂದು ವಿವರಿಸಲಿ.



© NCERT not to be republished

# ಜಾಣ ಅಜ್ಜಿ



ಒಮ್ಮೆ ಒಂದು ಪುಟ್ಟ ಕುರಿಮರಿ ತನ್ನ ಅಜ್ಜಿಯನ್ನು ಕಾಣಲು ಹೊರಟಿತ್ತು ದಾರಿಯಲ್ಲಿ ಒಂದು ತೋಳ ಈ ಕುರಿಮರಿಯನ್ನು ನೋಡಿ ಇದನ್ನು ಹಿಡಿಯಬೇಕು ಎಂದು ಅಂದುಕೊಂಡಿತು

ತೋಳವು ಕುರಿಮರಿಯನ್ನು ನೋಡಿತು ಮತ್ತು ಅವಳನ್ನು ಹಿಡಿಯಲು ಬಯಸಿತು.




ಕುರಿಮರಿಯೂ ತೋಳದ ಬಗ್ಗೆ ಎಲ್ಲವನ್ನೂ ತನ್ನ ಅಜ್ಜಿಗೆ ಹೇಳಿತು.

ಅಜ್ಜಿಗೆ ಒಂದು ಉಪಾಯ ಹೊಳೆಯಿತು.ಕುರಿಮರಿಯನ್ನು ಒಂದು ತಬಲದಲ್ಲಿ ಹಾಕಿ ತನ್ನ ಮನೆಗೆ ಉರುಳಿಸಿಕೊಂಡು ಹೋಯಿತು.



ಕಥೆಯನ್ನು ಜೋರಾಗಿ ಓದಿ ಮಕ್ಕಳಿಗೆ ಅದನ್ನು ಅಭಿನಯಿಸಲು ಹೇಳಿ.



ತಬಲ ಜೋರಾಗಿ ಉರುಳುತ್ತಾ ಹೋಯಿತು. ತೋಳ ಅದರ ಹಿಂದೆಯೇ ಬೆನ್ನಟ್ಟಿ ಹೋಯಿತು.



ತೋಳಕ್ಕೆ ಕುರಿಮರಿಯನ್ನು ಹಿಡಿಯಲು ಆಗಲೇ ಇಲ್ಲ. ಕುರಿಮರಿ ಕ್ಷೇಮವಾಗಿ ಮನೆ ಸೇರಿತು.






ಮಕ್ಕಳು ತಬಲಾ ಏಕೆ ಉರುಳಿತು ಎಂದು ತರ್ಕ ಮಾಡಲಿ. ತಬಲದ ಆಕಾರದ ಬಗ್ಗೆ ಮಕ್ಕಳು ಚರ್ಚಿಸಲಿ. ಹಾಗೂ ಕಾಡಿನಿಂದ ತನ್ನ ಮನೆಯವರೆಗೆ ಇಳಿಜಾರು ನೆಲ ಇರುವುದನ್ನು ಚರ್ಚಿಸಲಿ.

© NCERT not to be republished

# ಜಾರೋಣ ಬಾ

ಈ ಚಿತ್ರದಲ್ಲಿ ಮಕ್ಕಳು ಕೇರಂ ಆಡುತ್ತಿದ್ದಾರೆ. ನೀವು ಸಹ ಆಟವಾಡಿ, ಹೇಗೆ ಸ್ಟ್ರೈಕರ್ ಜಾರಿಕೊಂಡು ಹೋಗಿ ಮೂಲೆ ಸೇರುತ್ತದೆ ಎಂದು ಗಮನಿಸಿ.




A. ಕೆಳಗಿನ ಚಿತ್ರದಲ್ಲಿ **ಉ** ಉರುಳುವ ವಸ್ತುಗಳಿಗೆ ಹೋಗುವ ವಸ್ತುಗಳಿಗೆ **ಜಾ** ಎಂದು ಬರೆಯಿರಿ. ಜಾರಿಕೊಂಡು ◯ ಎಂದು ಬರೆಯಿರಿ.




B. ನಿಮ್ಮ ಸುತ್ತಮುತ್ತಲೂ ಇರುವ ವಸ್ತುಗಳಲ್ಲಿ ಉರುಳುವ ಹಾಗೂ ಜಾರುವ ವಸ್ತುಗಳನ್ನು ಸಂಗ್ರಹಿಸಿ ಉರುಳಲು ಸಾಧ್ಯವಿರುವ ಜಾರಲು ಸಾಧ್ಯವಿರುವ ವಸ್ತುಗಳನ್ನು ನೋಡಿದ್ದೀರಾ ಹೌದಾದರೆ ತರಗತಿಯಲ್ಲಿ ಚರ್ಚಿಸಿ.

C. ಮನೆಯಲ್ಲಿ ಅಥವಾ ಶಾಲೆಯಲ್ಲಿ ಇರುವ ಉರುಳಲು ಸಾಧ್ಯವಿರುವ ಜಾರಲು ಸಾಧ್ಯವಿರುವ ವಸ್ತುಗಳ ಬಗ್ಗೆ ಮಕ್ಕಳು ಹೇಳಲಿ ಸಮತಟ್ಟು ಮೇಲ್ಮೈಯಲ್ಲಿ ಉರುಳಲು ಜಾರಲು ಹೇಗೆ ಸಾಧ್ಯ ಎಂದು ಚರ್ಚಿಸಲಿ.

ಮಕ್ಕಳು ತಮ್ಮ ಮನೆ ಅಥವಾ ಶಾಲೆಯಲ್ಲಿ ರೋಲ್ ಮತ್ತು ಸ್ಲೈಡ್ ಮಾಡುವ ವಿವಿಧ ವಸ್ತುಗಳ ಬಗ್ಗೆ ಹೇಳಲು ಹೇಳಿ. ವಸ್ತುಗಳ ಯಾವ ವೈಶಿಷ್ಟ್ಯಗಳು ಸರಳ ಮೇಲ್ಮೈಯಲ್ಲಿ ಉರುಳಲು ಅಥವಾ ಸ್ಲೈಡ್ ಮಾಡಲು ಸಹಾಯ ಮಾಡುತ್ತದೆ ಎಂಬುದನ್ನು ಸಹ ಚರ್ಚಿಸಿ.

© NCERT not to be republished



## ಯೋಚಿಸಿ ಮಾಡು

ಈ ಕೆಳಗಿನ ವಸ್ತುಗಳು ಉರುಳುತ್ತದೆಯೇ ಜಾರುತ್ತದೆಯೇ ಅಥವಾ ಎರಡು ಮಾಡುತ್ತದೆಯೇ ಎಂದು ಸರಿ ಗುರುತು ✓ ಅಥವಾ ತಪ್ಪು ಗುರುತು X ಹಾಕಿ ತಿಳಿಸಿ.

| ವಸ್ತು | ಉರುಳುತ್ತದೆ | ಜಾರುತ್ತದೆ | ಉರುಳುತ್ತದೆ ಮತ್ತು ಜಾರುತ್ತದೆ |
|---|---|---|---|
|  | | | |
|  | | | |
|  | | | |
|  | | | |
|  | | | |
|  | | | |
|  | | | |
|  | | | |



## ಯೋಜನಾ ಕೆಲಸ

A. ಚಪ್ಪಲಿ ಅಥವಾ ಶೂ ಇಡುವ ರಟ್ಟಿನ ಡಬ್ಬಿಗಳು, ಖಾಲಿಯಾದ ಆಹಾರ ಅಥವಾ ಹಣ್ಣಿನ ಡಬ್ಬಿಗಳು ಸಂಗ್ರಹಿಸಿ ಡಬ್ಬಿಯ ಮುಂದೆ ತೂತುಕೊರೆದು ಕಣ್ಣು ಮೂಗು ಬಾಯಿ ಬರೆಯಿರಿ. ನಿಮ್ಮ ತಂದೆ ತಾಯಿ ಅಥವಾ ಶಿಕ್ಷಕಿಯರ ನೆರವಿನಿಂದ ಬೊಂಬೆಗಳನ್ನು ಮಾಡಿಕೊಂಡು ಆಡಿರಿ. ನಿಮ್ಮ ನೆಚ್ಚಿನ ಕಥೆಯ ಪಾತ್ರಗಳ ಬೊಂಬೆಗಳನ್ನು ಮಾಡಿ ತರಗತಿಯಲ್ಲಿ ಬೊಂಬೆಯಾಟ ಮಾಡಿ.

B. ವಿವಿಧ ವಸ್ತುಗಳನ್ನು ಬಳಸಿ ಗೋಪುರ ಮಾಡಿ ಯಾವ ಆಕಾರದ ವಸ್ತು ಬಳಸಿದರೆ ಎತ್ತರದ ದೃಢವಾದ ಗೋಪುರ ಮಾಡಬಹುದು ಎಂದು ತಿಳಿದುಕೊಳ್ಳಿ.

C. ಜೇಡಿ ಮಣ್ಣನ್ನು ಬಳಸಿ ವಿವಿಧ ಆಕಾರಗಳನ್ನು ಮಾಡಿ.

© NCERT not to be republished



# 3 ಮಾವಿನ ಔತಣ

QRickit

0124CH03

## ಓದೋಣ










© NCERT not to be republished













## ಮಾತಾಡೋಣ

A. ಚಿತ್ರದಲ್ಲಿರುವ ಹಕ್ಕಿಗಳನ್ನು ಗುರುತಿಸಿ.

B. ಮೊದಲಿಗೆ ಎಷ್ಟು ಪ್ರಾಣಿ ಅಥವಾ ಹಕ್ಕಿಗಳು ಮಾವಿನ ಹಣ್ಣನ್ನು ತಿನ್ನುತ್ತಿತ್ತು?

C. ಪ್ರತಿ ಸಲವೂ ಎಷ್ಟು ಹಕ್ಕಿಗಳು ಬಂದು ಸೇರಿದವು?

D. ಒಂದಕ್ಕಿಂತ ಒಂದು ಸಂಖ್ಯೆ ಹೆಚ್ಚು ಯಾವುದು? ಎರಡಕ್ಕಿಂತ ಒಂದು ಸಂಖ್ಯೆ ಹೆಚ್ಚು ಯಾವುದು? ಹೀಗೆ ಒಂಬತ್ತರವರೆಗೆ ಹೇಳಿ.

E. ಕೊನೆಗೆ ಎಷ್ಟು ಪ್ರಾಣಿಗಳು ಹಕ್ಕಿಗಳು ಮಾವಿನ ಹಣ್ಣನ್ನು ತಿಂದವು?

ಹಕ್ಕಿಗಳು ಸೇರುತ್ತಿದ್ದಂತೆ ಸಂಖ್ಯೆಗಳನ್ನು ಎಣಿಸಲು ಹೇಳಿ. ಎಲ್ಲಾ ಮಕ್ಕಳು ಬೇರೆ ಬೇರೆ ಹಕ್ಕಿ, ಪ್ರಾಣಿಗಳ ಪಾತ್ರ ವಹಿಸಿ ಅವುಗಳಂತೆ ಶಬ್ದ ಮಾಡಲು ಹೇಳಿ. ವಿವಿಧ ಹಕ್ಕಿಗಳ ಪ್ರಾಣಿಗಳ ಬಗ್ಗೆ ಮಾಹಿತಿ ನೀಡಿ, ಅವುಗಳ ಧ್ವನಿ ಅನುಕರಣೆ ಮಾಡಿ, ಅವುಗಳ ವಾಸಸ್ಥಾನದ ಬಗ್ಗೆ ಹೇಳಿ.



© NCERT not to be published

## ಹಕ್ಕಿಗಳ ಸಂಖ್ಯೆ ಹಾಗೂ ಬೆರಳುಗಳ ಸಂಖ್ಯೆ ಹೊಂದಿಸಿ ಬರೆಯಿರಿ













© NCERT not to be republished

## ಬೆರಳುಗಳ ಸಂಖ್ಯೆಯನ್ನು ಸರಿಯಾದ ಚುಕ್ಕೆಗಳ ಸಂಖ್ಯೆಯೊಂದಿಗೆ ಹೊಂದಿಸಿರಿ (ಒಂದು ಉದಾಹರಣೆ ಈಗಾಗಲೇ ನೀಡಲಾಗಿದೆ.)





## ಆಡೋಣ – ಬೆರಳಿನಲ್ಲಿ ಸಂವಹನ



ಉಳಿದ ಬೆರಳುಗಳನ್ನು ಮಡಚಿಕೊಂಡು ಮೂರು ಬೆರಳುಗಳನ್ನು ನಿಮ್ಮ ಗೆಳೆಯನಿಗೆ ತೋರಿಸಿ. ಆತನು ಸಹ ಅಷ್ಟೇ ಸಂಖ್ಯೆಯ ಬೆರಳುಗಳನ್ನು ಆದರೆ ಬೇರೆ ರೀತಿ ತೋರಿಸಬೇಕು. ಹೀಗೆ ಬೇರೆ ಬೇರೆ ಸಂಖ್ಯೆಗಳನ್ನು ಸಂವಹನ ಮಾಡಿ.

ಒಂದು ಕೈನಲ್ಲಿ ನಾಲ್ಕು ಬೆರಳನ್ನು ವಿವಿಧ ರೀತಿ ಹೇಗೆ ತೋರಿಸುತ್ತೀರ?



© NCERT not to be republished

## ಹೊರಗಡೆ ಆಡೋಣ



© NCERT not to be republished

ತರಗತಿಯ ಮಕ್ಕಳೆಲ್ಲ ಕೈ ಕೈ ಹಿಡಿದು ಒಂದು ವೃತ್ತ ಮಾಡಿ ಹಾಡು ಹೇಳಲಿ. ಒಂದು ಮಗು ಚಪ್ಪಾಳೆ ತಟ್ಟಿ ೪ ಎಂದು ಹೇಳುತ್ತಾನೆ. ಎಲ್ಲ ಮಕ್ಕಳು ೪ ಜನರ ಗುಂಪುಗಳಾಗಿ ಚದುರುತ್ತಾರೆ. ಹೀಗೆ ಬೇರೆ ಬೇರೆ ಸಂಖ್ಯೆಯ ಗುಂಪುಗಳನ್ನು ಮಾಡಿ ಆಡಬೇಕು.



# ನನ್ನ ಚಿತ್ರ ಬಿಡಿಸುವ ದಿನ



31ನೆಯ ಅಕ್ಟೋಬರ್ ಏಕತಾ ದಿವಸದಂದು ಮಕ್ಕಳಿಗೆ ಚಿತ್ರ ಬಿಡಿಸುವ ಸ್ಪರ್ಧೆ. ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ ಪ್ರತಿಯೊಂದು ಮಗುವಿಗೂ ಒಂದೊಂದು ವಸ್ತುವನ್ನು ಗೆರೆ ಎಳೆಯುವ ಮೂಲಕ.



ನಿಗದಿ ಮಾಡಿ ಅವರಿಗೆ ಸಾಕಷ್ಟು ಪದಾರ್ಥಗಳು ಇರುವಂತೆ ಖಾತ್ರಿಪಡಿಸಿಕೊಳ್ಳಿ.

**ಚಿತ್ರ ನೋಡಿ ಸರಿ ಗುರುತನ್ನು ✓ ಹೆಚ್ಚು / ಸಮ / ಕಡಿಮೆ ಕಾಲಂ ಗಳಲ್ಲಿ ಬರೆಯಿರಿ**

| ವಸ್ತು | ಮಕ್ಕಳ ಸಂಖ್ಯೆಗಿಂತ ಹೆಚ್ಚು ಇದೆ | ಮಕ್ಕಳ ಸಂಖ್ಯೆ ಅಷ್ಟೇ ಇದೆ | ಮಕ್ಕಳ ಸಂಖ್ಯೆಗಿಂತ ಕಡಿಮೆ ಇದೆ. |
|---|---|---|---|
|  | | | |
|  | | | |
|  | | | |
|  | | | |
|  | | | |

ವಸ್ತುಗಳ ಸಂಖ್ಯೆಯು ಮಕ್ಕಳ ಸಂಖ್ಯೆಗಿಂತ ಹೆಚ್ಚು ಕಡಿಮೆ ಅಥವಾ ಸಮವಾಗಿದೆ ಎಂದು ಮಕ್ಕಳಿಗೆ ಹೇಗೆ ಗೊತ್ತಾಯಿತು ಎಂದು ಚರ್ಚಿಸಿ ಹಾಗೂ ವಸ್ತುಗಳ ಸಂಖ್ಯೆ ಮಕ್ಕಳಿಗೆ ಮಕ್ಕಳ ಸಂಖ್ಯೆಗಿಂತ ಕಡಿಮೆ ಇದ್ದಾಗ ವಸ್ತುಗಳನ್ನು ಹಂಚಿಕೊಳ್ಳುವ ಅಭ್ಯಾಸ ಕುರಿತು ಮಾತನಾಡಿ ಹಾಗೂ ಏಕತಾ ದಿವಸದ ಪ್ರಾಮುಖ್ಯತೆ ತಿಳಿಸಿ.



© NCERT not to be republished



## ಮಾಡೋಣ ಬಾ

A. ಯಾವುದರ ಸಂಖ್ಯೆ ಹೆಚ್ಚಾಗಿ ಇದೆಯೋ ಅದಕ್ಕೆ ಸರಿ ಗುರುತು ✓ ಹಾಕಿ





B. ಯಾವುದರ ಸಂಖ್ಯೆ ಕಡಿಮೆ ಇದೆಯೋ ಅದಕ್ಕೆ ಸರಿ ಗುರುತು ✓ ಹಾಕಿ





C. ಯಾವುದರ ಸಂಖ್ಯೆ ಕಡಿಮೆ ಇದೆಯೋ ಅದಕ್ಕೆ ಸರಿ ಗುರುತು ✓ ಹಾಕಿ







## ಆಡೋಣ ಬೆರಳಾಟ

A. ನಿನ್ನ ಗೆಳೆಯರೊಂದಿಗೆ ಈ ಬೆರಳಾಟವನ್ನು ಹಾಡು ಬೆರಳುಗಳನ್ನು ತೋರಿಸು ಉದಾಹರಣೆಗೆ ನಾಲ್ಕು ಬೆರಳು ತೋರಿಸು ನಿನ್ನ ಗೆಳೆಯ ಅದಕ್ಕಿಂತ ಕಡಿಮೆ ಸಂಖ್ಯೆಯ ಬೆರಳುಗಳನ್ನು ತೋರಿಸಬೇಕು.

B. ನಿಮ್ಮ ಗೆಳೆಯನನ್ನು ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಬೆರಳನ್ನು ತೋರಿಸಲು ಕೇಳು ಹೆಚ್ಚಿನ ಸಂಖ್ಯೆಯ ಹಾಗೂ ಕಡಿಮೆ ಸಂಖ್ಯೆಯ ಬೆರಳುಗಳನ್ನು ಬೇರೆ ಬೇರೆ ರೀತಿ ತೋರಿಸಲಿ.

© NCERT not to be republished

## 1, 2, 3 . . . . . ಓಡು



**ಕೊಟ್ಟಿರುವ ಚಿತ್ರ ನೋಡಿ ಸೂಚನೆಗಳನ್ನು ಅನುಸರಿಸಿ.**

A. ಒಂದೇ ಒಂದು △ ವಸ್ತುವಿದ್ದರೆ ಅದರ ಸುತ್ತ ತ್ರಿಕೋನಾಕಾರವನ್ನು 1 ಬರೆಯಿರಿ ಮತ್ತು ಕೆಳಗೆ 1 ಬರೆಯಿರಿ

| | | | | | | | | | | |
|---|---|---|---|---|---|---|---|---|---|---|
| 1 ಒಂದು | 1 | 1 | 1 | 1 | 1 | | | | | |

B. ಒಂದೇ ರೀತಿಯ ಎರಡು ವಸ್ತುಗಳು ಇದ್ದರೆ ಅದರ ಸುತ್ತ ವೃತ್ತಾಕಾರವನ್ನು ◯ ಬರೆಯಿರಿ ಮತ್ತು ಕೆಳಗೆ 2 ಬರೆಯಿರಿ

| | | | | | | | | | | |
|---|---|---|---|---|---|---|---|---|---|---|
| 2 ಎರಡು | 2 | 2 | 2 | 2 | 2 | | | | | |

C. ಒಂದೇ ರೀತಿಯ ವಸ್ತುಗಳು ಮೂರು ಕಂಡರೆ ಅವುಗಳ ಸುತ್ತ ಚೌಕಟ್ಟು ಗುರುತು ▭ ಬರೆಯಿರಿ ಹಾಗೂ ಕೆಳಗೆ 3 ಬರೆಯಿರಿ.

| | | | | | | | | | | |
|---|---|---|---|---|---|---|---|---|---|---|
| 3 ಮೂರು | 3 | 3 | 3 | 3 | 3 | | | | | |

© NCERT not to be republished



D. ಮೇಲಿನ ಚಿತ್ರದಲ್ಲಿ 4 ವಸ್ತುಗಳಿದ್ದರೆ ಅವುಗಳ ಸುತ್ತ ತ್ರಿಕೋನ ಗುರುತು △ ಬರೆಯಿರಿ ಹಾಗೂ ಕೆಳಗೆ 4 ಬರೆಯಿರಿ

| | | | | | | | | | | |
|---|---|---|---|---|---|---|---|---|---|---|
| 4 ನಾಲ್ಕು | 4 | 4 | 4 | 4 | 4 | | | | | |

E. ಒಂದೇ ರೀತಿಯ 5 ವಸ್ತುಗಳಿದ್ದರೆ ಅವುಗಳ ಸುತ್ತ ವೃತ್ತ ವೃತ್ತಾಕಾರದ ಗುರುತು ◯ A. ಬರೆಯಿರಿ ಹಾಗೂ ಕೆಳಗೆ 5 ಬರೆಯಿರಿ

| | | | | | | | | | | |
|---|---|---|---|---|---|---|---|---|---|---|
| 5 ಐದು | 5 | 5 | 5 | 5 | 5 | | | | | |

F. ಒಂದೇ ರೀತಿಯ 6 ವಸ್ತುಗಳಿದ್ದರೆ ಅವುಗಳ ಸುತ್ತ ಚೌಕಟ್ಟು ಗುರುತು ▭ ಬರೆಯಿರಿ ಹಾಗೂ ಕೆಳಗೆ 6 ಬರೆಯಿರಿ

| | | | | | | | | | | |
|---|---|---|---|---|---|---|---|---|---|---|
| 6 ಆರು | 6 | 6 | 6 | 6 | 6 | | | | | |

© NCERT not to be republished



G. ಮೇಲಿನ ಚಿತ್ರದಲ್ಲಿ 7 ವಸ್ತುಗಳಿದ್ದರೆ ಅವುಗಳ ಸುತ್ತ ತ್ರಿಕೋನ ಗುರುತು △ ಬರೆಯಿರಿ ಹಾಗೂ ಕೆಳಗೆ7 ಬರೆಯಿರಿ




H. ಒಂದೇ ರೀತಿಯ 8 ವಸ್ತುಗಳಿದ್ದರೆ ಅವುಗಳ ಸುತ್ತ ವೃತ್ತ ವೃತ್ತಾಕಾರದ ಗುರುತು ◯ ಬರೆಯಿರಿ ಹಾಗೂ ಕೆಳಗೆ 8 ಬರೆಯಿರಿ




I. ಒಂದೇ ರೀತಿಯ 9 ವಸ್ತುಗಳಿದ್ದರೆ ಅವುಗಳ ಸುತ್ತ ಚೌಕಟ್ಟು ಗುರುತು ▭ ಬರೆಯಿರಿ ಹಾಗೂ ಕೆಳಗೆ 9 ಬರೆಯಿರಿ




ವಸ್ತುಗಳನ್ನು ಎಣಿಸಲು ಸಂಖ್ಯೆಗಳನ್ನು ಮರಳಲ್ಲಿ ಬರೆಯಲು ಪ್ರೋತ್ಸಾಹಿಸಿರಿ. ಒಬ್ಬ ಮಗುವಿನ ಬೆನ್ನಿನ ಮೇಲೆ ಒಂದು ಸಂಖ್ಯೆಯನ್ನು ಬರೆಯಲು ಮತ್ತೊಬ್ಬ ವಿದ್ಯಾರ್ಥಿಗೆ ಹೇಳಿ. ಅದು ಯಾವ ಸಂಖ್ಯೆ ಎಂದು ಅವನು ಊಹಿಸಲಿ. ಮೇಲಿನ ಚಿತ್ರದಲ್ಲಿ ಇರುವ 7 ನಕ್ಷತ್ರಗಳನ್ನು ನಾವು ಆಕಾಶದಲ್ಲಿ ಕಾಣಬಹುದು. ಇದನ್ನು ಸಪ್ತ ಋಷಿ ಮಂಡಲ ಅಥವಾ ಬಿಗ್ ಡಿಪ್ಪರ್ ಎಂದು ಕರೆಯುತ್ತಾರೆ. ಹೀಗೆಂದು ಮಕ್ಕಳಿಗೆ ತಿಳಿಸಿ.



© NCERT not to be republished

## ಎಣಿಸಿ - ಹೋಲಿಸಿ



3



7



5

## ಎಣಿಸಿ ಬಣ್ಣ ಹಚ್ಚಿ

A. 8 ನಕ್ಷತ್ರಗಳಿಗೆ ಬಣ್ಣ ಹಚ್ಚಿ



B. 5 ಹೂಗಳಿಗೆ ಬಣ್ಣ ಹಚ್ಚಿ



C. 6 ಚೆಂಡುಗಳಿಗೆ ಬಣ್ಣ ಹಚ್ಚಿ.



© NCERT not to be republished

## ಕ್ರಮವಾಗಿ ಸಂಖ್ಯೆಗಳನ್ನು ಕೂಡಿಸಿ

A. ಸಂಖ್ಯೆ ಒಂದರಿಂದ ಒಂಬತ್ತರವರೆಗೆ ಸರಿಯಾದ ಕ್ರಮದಲ್ಲಿ ಬರೆದು ದಾರಿ ರಚಿಸಿ. ಗೆರೆ ಒಂದರ ಮೇಲೆ ಒಂದು ಬರಬಾರದು.

i.




ii.

| | | |
|---|---|---|
| 1 | 3 | 4 |
| 9 | 2 | 5 |
| 8 | 7 | 6 |

iii.

| | | |
|---|---|---|
| 5 | 6 | 7 |
| 4 | 3 | 8 |
| 1 | 2 | 9 |

B. ಒಂದು ತುಂಟ ಕಪಿ ಸಂಖ್ಯೆ ಬಿಲ್ಲೆಗಳನ್ನು ಕಲಸಿ ಬಿಟ್ಟಿದೆ ಇವುಗಳನ್ನು ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಯವರೆಗೆ ಕ್ರಮವಾಗಿ ಬರೆಯಿರಿ.




© NCERT not to be republished

C. ಅಭ್ಯಾಸ ಹಾಳೆಯ ಮೇಲೆ ಒಂದು ಬೆಕ್ಕು ಓಡಾಡಿ ಕೆಲವು ಸಂಖ್ಯೆಗಳು ಅಳಿಸಿ ಹೋಗಿವೆ. ಬಿಟ್ಟಿರುವ ಸಂಖ್ಯೆಗಳನ್ನು ತುಂಬಿ.

___, 5, 6, ___, 8

___, 2, ___, 4, 5

5, ___, ___, ___, 9

3, ___, ___, 6, ___





**ಅತಿ ದೊಡ್ಡ ಸಂಖ್ಯೆಗೆ ಬಣ್ಣ ತುಂಬಿ.**




© NCERT not to be republished

A. ಕೆಳಗಿನ ಚಿತ್ರದಲ್ಲಿ ಹಳದಿ ಪೆಟ್ಟಿಗೆಗಳು ಎಷ್ಟಿವೆ ? ಎಣಿಸಿ ಸಂಖ್ಯ ಬರೆಯಿರಿ



B. ಕೆಳಗಿನ ಚಿತ್ರದಲ್ಲಿ ಎಷ್ಟು ನೇರಳೆ ಹಣ್ಣುಗಳು ಇವೆ?



C. ಕೆಳಗಿನ ಚಿತ್ರದಲ್ಲಿ ಎಷ್ಟು ಕುರಿಗಳು ಇವೆ?



© NCERT not to be republished

D. ಯಾವುದಾದರೂ ನಾಲ್ಕು ಹಣ್ಣುಗಳನ್ನು ಚಿತ್ರಿಸಿ



E. ಯಾವ ಎರಡು ಗುಂಪುಗಳಲ್ಲಿ ಒಟ್ಟು ಎಂಟು ಹಣ್ಣುಗಳಿವೆ? ಸುತ್ತುಗಟ್ಟಿ



F. ಯಾವ ಎರಡು ಗುಂಪುಗಳಲ್ಲಿ ಒಟ್ಟು ಏಳು ಕೊಡೆಗಳು ಇವೆ ? ಸುತ್ತುಗಟ್ಟಿ

G. ಯಾವುದು ಕಡಿಮೆ ಇವೆ? ಲೋಟಗಳಾ ? ಚಮಚಗಳಾ ?ಸುತ್ತುಗಟ್ಟಿ





## ನಿಯೋಜಿತ ಕೆಲಸ

ಮಕ್ಕಳಿಗೆ ಒಂದರಿಂದ ಒಂಬತ್ತಿನವರೆಗೆ ತಮ್ಮದೇ ಆದ ಸಂಖ್ಯಾ ಬಿಲ್ಲೆಗಳನ್ನು ಮಾಡಲು ಹೇಳಿ. ವಿವಿಧ ಬಣ್ಣಗಳ ಹಾಳೆಗಳನ್ನು ಬಳಸಬಹುದು. ಬಿಲ್ಲೆಗಳ ಮೇಲೆ ಸಂಖ್ಯೆಗಳ ಜೊತೆ ಅಷ್ಟೇ ಸಂಖ್ಯೆಯ ವಸ್ತುಗಳನ್ನು ಬೇಕಾದರೆ ಬರೆದು ಅಥವಾ ಅಂಟಿಸಿ ಸಿದ್ಧಪಡಿಸಬಹುದು.

© NCERT not to be republished

# 4 10 ಮಾಡುವುದು



## ಚುಕ್ಕೆಯ ಹುಳು ಮತ್ತು ಅದರ ವಿನ್ಯಾಸ

ಜೀರುಂಡೆಯನ್ನು ನೋಡಿದ್ದೀರಾ?
ಅದರ ಮೈಮೇಲೆ ಚುಕ್ಕೆಗಳಿರುತ್ತವೆ.
ಎಷ್ಟು ಚುಕ್ಕೆಗಳಿರುತ್ತವೆ,
ಗಮನಿಸಿದ್ದೀರಾ?



A. ಪ್ರತಿಯೊಂದು ಜೀರುಂಡೆ ಮೇಲೆ ಎಷ್ಟು ಚುಕ್ಕೆಗಳಿವೆ ಬರೆಯಿರಿ









B. ಹುಣಸೆ ಬೀಜ ಕಲ್ಲು ಗುಂಡಿಗಳು ಕುಂಕುಮದ ಬೊಟ್ಟು ಇಂತಹ ವಸ್ತುಗಳ ಮೇಲೆ ಚುಕ್ಕೆ ವಿನ್ಯಾಸಗಳನ್ನು ಮಾಡಿ ಮತ್ತು ಎಷ್ಟು ಚುಕ್ಕೆಗಳು ಇವೆ ಎಂದು ಗುರುತಿಸಿ.



© NCERT not to be republished

C. ಚಿತ್ರದಲ್ಲಿ ಪ್ರತಿಯೊಂದು ಕೆಂಪು ಬಿಂದಿಯ ಗುಂಪಿನಲ್ಲೂ ಎಷ್ಟು ಚುಕ್ಕೆಗಳಿವೆ ಎಂದು ಗುರುತಿಸಿ.





## ಆಡೋಣ

D. ನಿನ್ನ ಗೆಳೆಯನೊಂದಿಗೆ ಆಡು. ದಾಳವನ್ನು ಉರುಳಿಸಿ ಯಾವ ಸಂಖ್ಯೆ ಬರುತ್ತದೆ ಅಷ್ಟು ಸಂಖ್ಯೆ ಇರುವ ಚೌಕಕ್ಕೆ ಬಣ್ಣ ತುಂಬು.



ನಿಮ್ಮ ನಿಮ್ಮ ಬಣ್ಣಗಳನ್ನು ಆಯ್ದುಕೊಂಡು ಚೌಕಗಳನ್ನು ತುಂಬಿ

ನನ್ನ ಬಣ್ಣ ☐

ಗೆಳೆಯನ ಬಣ್ಣ ☐



ಯಾರು ಹೆಚ್ಚು ಚೌಕಗಳಿಗೆ ಬಣ್ಣ ತುಂಬುತ್ತಾರೋ ಅವರು ಗೆದ್ದ ಹಾಗೆ.

ನೋಡುತ್ತಿದ್ದಂತೆಯೇ ಎಣಿಸದೆಯೇ ಎಷ್ಟು ಚುಕ್ಕೆಗಳಿವೆ ಎಂದು ಗುರುತಿಸುವಷ್ಟು ಪರಿಚಯ ಆಗುವಂತೆ ತೋರುಬಿಲ್ಲೆ ಸಿದ್ಧಪಡಿಸಿ. ಇದನ್ನು ಸಬಿಟೈಸೇಷನ್ ಎನ್ನುತ್ತಾರೆ. ವಿವಿಧ ವಿನ್ಯಾಸಗಳಲ್ಲಿ 1 ರಿಂದ 9 ಸಂಖ್ಯೆಯ ಇನ್ನೂ ಹೆಚ್ಚು ತೋರಿಬಿಲ್ಲೆಗಳನ್ನು ತಯಾರಿಸು.



© NCERT not to be republished

## ಮಾಯವಾಗುವ ಗುಂಡಿಗಳು

ಕೋತಿ ತಿಮ್ಮಣ್ಣ ಅವನ ಅಚ್ಚುಮೆಚ್ಚಿನ ನಾಲ್ಕು ಗುಂಡಿಗಳ ಅಂಗಿಯನ್ನು ಧರಿಸುತ್ತಾನೆ. ಅವನಿಗೆ ಬಾಳೆಹಣ್ಣು ಎಂದರೆ ತುಂಬಾ ಇಷ್ಟ. ತೋಟಕ್ಕೆ ಹೋಗಿ ಹೊಟ್ಟೆ ತುಂಬಾ ಬಾಳೆಹಣ್ಣುಗಳನ್ನು ತಿಂದುಬಿಡುತ್ತಾನೆ. ಆಗೇನಾಯ್ತು ಗೊತ್ತಾ?

ತಿಂತಾ ತಿಂತಾ ಅವನ ಹೊಟ್ಟೆ ದಪ್ಪ ಆಗುತ್ತಾ ಹೋಯಿತು. ಒಂದೊಂದೇ ಗುಂಡಿ ಕಿತ್ತುಕೊಂಡು ಉರುಳಿ ಹೋಗುತ್ತದೆ. ಆದರೂ ತಿನ್ನುವುದನ್ನು ನಿಲ್ಲಿಸುವುದಕ್ಕೆ ಮನಸ್ಸು ಬರುವುದಿಲ್ಲ. ಕೊನೆಗೆ ಎಲ್ಲ ಗುಂಡಿಗಳು ಕಿತ್ತು ಹೋಗುತ್ತವೆ.



ನಾಲ್ಕು

☐ ಗುಂಡಿಗಳು



ಮೂರು

☐ ಗುಂಡಿಗಳು



ಎರಡು

☐ ಗುಂಡಿಗಳು



ಒಂದು

☐ ಗುಂಡಿಗಳು



ಸೊನ್ನೆ

0 ಗುಂಡಿಗಳು

ಕೊನೆಯಲ್ಲಿ ಅಂಗಿಯಲ್ಲಿ ಎಷ್ಟು ಗುಂಡಿಗಳು ಉಳಿದಿದ್ದವು ಎಂದು ಚರ್ಚಿಸಿ, ತಮ್ಮ ಸುತ್ತಮುತ್ತಲ ವಸ್ತುಗಳಲ್ಲಿ ಸೊನ್ನೆ ವಸ್ತುಗಳು ಯಾವುವು ಎಂದು ಹೇಳಿ. ಒಂದು ಎರಡು ಮೂರು ನಾಲ್ಕರಂತೆ ಸೊನ್ನೆಯೂ ಒಂದು ಸಂಖ್ಯೆ ಎಂದು ಅವರಿಗೆ ತಿಳಿಯಲಿ
ಸಮತೋಲನದ ಆಹಾರ ಎಂದರೇನು? ಮಿತಿಮೀರಿ ತಿಂದರೆ ದುಷ್ಪರಿಣಾಮಗಳು ಏನಾಗುತ್ತವೆ ಎಂದು ಅವರೊಂದಿಗೆ ಚರ್ಚಿಸಿ.



© NCERT not to be republished

ಮರದ ಕೊಂಬೆಯ ಮೇಲೆ ಕುಳಿತಿರುವ ಹಕ್ಕಿಗಳ ಸಂಖ್ಯೆ ಬರೆಯಿರಿ.









## 0 ಸೊನ್ನೆ ಬರೆಯಿರಿ



## ಯೋಚಿಸಿ ಹೇಳು

A. ರಾತ್ರಿ ಹೊತ್ತು ಎಷ್ಟು ಸೂರ್ಯಗಳು ಕಾಣುತ್ತವೆ ?

B. ಮಧ್ಯಾಹ್ನ ಎಷ್ಟು ಚಂದ್ರ ಕಾಣುತ್ತವೆ ?

ಭೌತಿಕ ವಸ್ತುಗಳನ್ನು ಬಳಸಿ ಒಂದೊಂದೇ ಸಂಖ್ಯೆ ಕಡಿಮೆ ಮಾಡಿ ಸೊನ್ನೆಯ ಪರಿಕಲ್ಪನೆ ಬರಿಸಿ. ವಸ್ತು ಒಂದರ ಅನುಪಸ್ಥಿತಿಯನ್ನು ಚರ್ಚಿಸಿ ಆ ಸಂಖ್ಯೆಯನ್ನು ಸೊನ್ನೆ ಎಂದು ತಿಳಿಸಿ ಉದಾಹರಣೆಗೆ ತರಗತಿಯಲ್ಲಿ 0 ಬಸ್ಸುಗಳಿವೆ ಮಕ್ಕಳಿಗೆ ಐದರಿಂದ ಸೊನ್ನೆವರೆಗೆ ಹಿಂದು ಹಿಂದಕ್ಕೆ ಎಣಿಸಲು ಪ್ರೋತ್ಸಾಹಿಸಿ ನಂತರ ಒಂಬತ್ತರಿಂದ ಸೊನ್ನೆವರೆಗೆ ಪ್ರಯತ್ನಿಸಲಿ.

© NCERT not to be republished

## ಹತ್ತನೆಯ ಹುಟ್ಟುಹಬ್ಬ

ಇಂದು ಆಶಾಳ 10ನೆಯ ಹುಟ್ಟುಹಬ್ಬ. ಅವಳ ತಂದೆ ಅವಳಿಗಾಗಿ ಸಿಹಿಯನ್ನ ತಯಾರಿಸಿದರು. ಅವಳ ಗೆಳತಿಯರೊಂದಿಗೆ ತನ್ನ ಹುಟ್ಟು ಹಬ್ಬವನ್ನು ಆಚರಿಸುತ್ತಿದ್ದಾಳೆ.






ಈಗ ನನಗೆ ಒಂಬತ್ತು ವರ್ಷ ವಯಸ್ಸು. 1 ವರ್ಷವಾದ ಮೇಲೆ ನನಗೆ 10 ವರ್ಷವಾಗುತ್ತದೆ . ಅಂದರೆ ಒಂಬತ್ತರ ಜೊತೆಗೆ ಒಂದು ಸೇರಿದರೆ 10.



ತನ್ನ ಹುಟ್ಟು ಹಬ್ಬದಂದು ಅವಳು ______ ದೀಪಗಳನ್ನು ಬೆಳಗಿದಳು.

ವಸ್ತುಗಳನ್ನು ಎಣಿಸಿ ಸಂಖ್ಯೆ ಬರೆಯಿರಿ:











| ☐ | ☐ | ☐ | ☐ | ☐ |
|---|---|---|---|---|
| ಮಣಿಗಳು | ಲಾಡುಗಳು | ಬಣ್ಣದ ಕಡ್ಡಿಗಳು | ಬಾಳೆಹಣ್ಣು, | ಎಲೆ |

## ಮಾಡೋಣ

A. ಚಿತ್ರದಲ್ಲಿರುವ ಮಣಿಗಳು ಎಷ್ಟು ಎಂದು ಎಣಿಸಿ ಉಳಿದ ಮಣಿಗಳ ಚಿತ್ರ ಬಿಡಿಸಿ 10 ಮಣಿಗಳ ಸರ ಮಾಡಿ.

i.



ii.



iii.



iv.



B. ಗುಂಡಿಗಳ ಚಿತ್ರ ಬರೆದು ಒಟ್ಟು 10 ಗುಂಡಿಗಳು ಮಾಡಿ

i.



ii.



iii.



iv.



© NCERT not to be republished

## ಸುಲಭ ಐದು ಮತ್ತು ಹತ್ತು

ಮೊದಲನೆಯ ಉದಾಹರಣೆ ನೋಡಿ, ಅದರಂತೆ ಸಂಖ್ಯಾ ಜೋಡಿಗಳನ್ನು ಕಡ್ಡಿಯ ಆಧಾರದ ಮೇಲೆ ಬರೆಯಿರಿ ಉದಾಹರಣೆಗೆ:

| | |
|---|---|
|  | 1 ಮತ್ತು 4 |
|  | ___ ಮತ್ತು ___ |
|  | ___ ಮತ್ತು ___ |
|  | ___ ಮತ್ತು ___ |
|  | ___ ಮತ್ತು ___ |



### ಆಡೋಣ

ನೀನು ಮೂರು ಬೆರಳುಗಳನ್ನು ತೋರಿಸು ಒಟ್ಟು ಐದು ಆಗುವಂತೆ ನಿನ್ನ ಗೆಳೆಯ ಇನ್ನೂ ಉಳಿದ ಬೆರಳುಗಳನ್ನು ತೋರಿಸಲಿ.




© NCERT not to be republished

## ಹತ್ತರ ಸಂಖ್ಯಾ ಜೋಡಿಗಳು

ನಮ್ಮ ಎರಡೂ ಕೈಗಳನ್ನು ಬಳಸಿ ಬೆರಳ ಆಟ ಆಡೋಣ. ಹುಡುಗನೊಬ್ಬ ಒಂದಷ್ಟು ಬೆರಳುಗಳನ್ನು ತೋರಿಸುತ್ತಾನೆ. ಇವನು ಎಷ್ಟು ಬೆರಳುಗಳನ್ನು ಮಡಚಿಕೊಂಡಿದ್ದಾನೋ ಅಷ್ಟನ್ನು ಇನ್ನೊಬ್ಬ ತೋರಿಸಬೇಕು.

ಮೊದಲ ಉದಾಹರಣೆ ಅನುಸರಿಸಿ ಸಂಖ್ಯಾ ಜೋಡಿಗಳನ್ನು ಕೋಷ್ಟಕದಲ್ಲಿ ತುಂಬಿ.

| | | | |
|---|---|---|---|
|  |  | = |  |
| 1 | 9 | = | 10 |
|  |  | = |  |
| | | = | |
|  |  | = |  |
| | | = | |
|  |  | = |  |
| | | = | |
|  |  | = |  |
| | | = | |

© NCERT not to be republished

## ಇಸ್ಪೀಟು ಆಟ ಆಡೋಣ

### ಸಂಖ್ಯಾ ಎಲೆಗಳು ಸೊನ್ನೆಯಿಂದ ಹತ್ತರವರೆಗಿನ ಜೊತೆಗಳು

ಎಲ್ಲಾ ಎಲೆಗಳನ್ನು ಸಂಖ್ಯೆಗಳು ಕಾಣದಂತೆ ತಿರುಗಿಸಿ ಇಡಿ. ಒಬ್ಬ ಹುಡುಗ ಒಂದು ಎಲೆಯನ್ನು ತೆಗೆದು ಸಂಖ್ಯೆ ಕಾಣುವಂತೆ ತಿರುಗಿಸಿ ಇಡುತ್ತಾನೆ. ಇನ್ನೊಬ್ಬ ಇನ್ನೊಂದು ಎಲೆಯನ್ನು ತೆಗೆಯುತ್ತಾನೆ ಅವೆರಡೂ ಒಟ್ಟು 10 ಆದರೆ ಆ ಎಲೆಗಳನ್ನು ಅವನು ತೆಗೆದುಕೊಳ್ಳುತ್ತಾನೆ. ಮತ್ತೆ ಮೊದಲ ಹುಡುಗ ಇನ್ನೊಂದು ಎಲೆ ತೆಗೆದುಕೊಳ್ಳುತ್ತಾನೆ.

## 20ರವರೆಗೆ ಎಣಿಸುವುದು

ಕಾವೇರಿ ಕೊಡಗಿನಲ್ಲಿ ವಾಸಿಸುತ್ತಾಳೆ ಅವಳು ತನ್ನ ತಂದೆಗೆ ಕಿತ್ತಳೆ ಹಣ್ಣನ್ನು ಪೆಟ್ಟಿಗೆಯಲ್ಲಿ ಕಟ್ಟಲು ನೆರವು ನೀಡುತ್ತಿದ್ದಾಳೆ ಒಂದು ಪೆಟ್ಟಿಗೆಯಲ್ಲಿ ಕೇವಲ ಹತ್ತು ಕಿತ್ತಳೆ ಹಣ್ಣು ಹಿಡಿಸುತ್ತದೆ ಕಿತ್ತಳೆ ಹಣ್ಣುಗಳನ್ನು ಎಣಿಸೋಣ.

| | | |
|---|---|---|
|  | 10 | 10 ಹತ್ತು |
|  | 10 ಮತ್ತು 1 ಒಂದು | 11 ಹನ್ನೊಂದು |
|  | 10 ಮತ್ತು 2 ಒಂದು | 12 ಹನ್ನೆರಡು |

5 ಮತ್ತು 10 ಸಂಖ್ಯೆಗಳನ್ನು ಹೇಗೆ ವಿಭಜಿಸಬಹುದು ಎಂಬುದನ್ನು ಅರ್ಥ ಮಾಡಿಸಲು ನೆನಪಿನಲ್ಲಿಡಲು ಮಕ್ಕಳೊಂದಿಗೆ ಚರ್ಚಿಸಿ. ಉದಾಹರಣೆಗೆ ಶಿಕ್ಷಕಿ ಎರಡು ಎಂದರೆ ಮಕ್ಕಳು ಮೂರು ಎನ್ನಬೇಕು (ಇದು ಐದರ ವಿಭಜನೆ). ಅದೇ ರೀತಿ ಶಿಕ್ಷಕಿ ನಾಲ್ಕು ಎಂದರೆ ಮಕ್ಕಳು 6 ಎನ್ನಬೇಕು (ಇದು ಹತ್ತರ ವಿಭಜನೆ.) ಇದು ಮಕ್ಕಳು ಹತ್ತಕ್ಕಿಂತ ಹೆಚ್ಚು ಎಣಿಸಲು ಪ್ರಾರಂಭಿಸಲು ಸುಸಮಯ. ಹಿಂದಿನ ಸಂಖ್ಯೆಗಿಂತ ಮುಂದಿನ ಸಂಖ್ಯೆಯು ಒಂದು ಸಂಖ್ಯೆ ಅಷ್ಟು ದೊಡ್ಡದಾಗಿರುತ್ತದೆ ಎಂಬ ವಿಷಯದತ್ತ ಮಕ್ಕಳ ಗಮನ ಸೆಳೆಯಬೇಕು.

© NCERT not to be republished

| | | |
|---|---|---|
|  | **10** ಮತ್ತು **3** ಒಂದು | **13** ಹದಿಮೂರು |
|  | **10** ಮತ್ತು **4** ಒಂದು | **14** ಹದಿನಾಲ್ಕು |
|  | **10** ಮತ್ತು **5** ಒಂದು | **15** ಹದಿನೈದು |
|  | **10** ಮತ್ತು **6** ಒಂದು | **16** ಹದಿನಾರು |
|  | **10** ಮತ್ತು **7** ಒಂದು | **17**ಹದಿನೇಳು |
|  | **10** ಮತ್ತು **8** ಒಂದು | **18** ಹದಿನೆಂಟು |
|  | **10** ಮತ್ತು **9** ಒಂದು | **19** ಹತ್ತೊಂಬತ್ತು |
|  | **10** ಮತ್ತು **10** ಒಂದು | **20** ಇಪ್ಪತ್ತು |

© NCERT not to be republished

11 ರಿಂದ 20 ರವರೆಗೆ ಸಂಖ್ಯೆಗಳನ್ನು ಬರೆಯಿರಿ

| **11** | **12** | **13** | **14** | **15** | **16** | **17** | **18** | **19** | **20** |
|---|---|---|---|---|---|---|---|---|---|
| | | | 14 | | | | | 19 | |
| | | | | | | 17 | | | |
| 11 | | | | | | | | | 20 |
| | | 13 | | | | | 18 | | |
| | | | | 15 | | | | | |
| | 12 | | | | | | | 19 | |

© NCERT not to be republished

ಮಕ್ಕಳು 20ರವರೆಗೆ ಭೌತಿಕ ವಸ್ತುಗಳನ್ನು ಎಣಿಸಲು ನೆರವಾಗಿ. ಅವರಿಗೆ ಕೈ ತುಂಬಾ ಬೀಜಗಳನ್ನು ಅಥವಾ ಗುಂಡಿಗಳನ್ನು ಕೊಟ್ಟು ಎಷ್ಟಿರಬಹುದು ಎಂದು ಊಹಿಸಲು ಹೇಳಿ. ನಂತರ ಗುಂಪುಗಳಾಗಿ ಮಾಡಿ ಎಣಿಸಿ. ನಿಮ್ಮ ಊಹೆ ನಿಖರ-ಸಂಖ್ಯೆಗೆ ಎಷ್ಟು ಸಮೀಪವಿತ್ತು? ತಮ್ಮ ಊಹೆ ಎಷ್ಟು ಸಮಂಜಸ ಎಂದು ಯೋಚಿಸಲಿ.



## ಎಣಿಸಿ ಬರೆಯಿರಿ

A. ಎಣಿಸಿ ಉತ್ತರ ಬರೆಯಿರಿ:





B. ಪಕ್ಕದಲ್ಲಿ ಕೊಟ್ಟಿರುವ ಸಂಖ್ಯೆಯಷ್ಟು ದಶಕ -ಚೌಕಗಳಿಗೆ ಬಣ್ಣ ತುಂಬಿಸಿ.

**14**



**19**



**16**



C. ಸರಣಿಯ ಪ್ರಕಾರ ಸಂಖ್ಯೆಗಳನ್ನು ಬರೆಯಿರಿ

| | | | |
|---|---|---|---|
| 1 | | 3 | |
| 8 | | 6 | |
| 9 | | | 12 |
| | 15 | | |
| | | | 20 |

© NCERT not to be republished

D. ಹತ್ತು ವಸ್ತುಗಳನ್ನು ಒಂದು ಗುಂಪು ಮಾಡಿ ಪಕ್ಕದ ಕಾಲಂನಲ್ಲಿ ಇರುವ ಸಂಖ್ಯೆಗಳೊಂದಿಗೆ ಹೊಂದಿಸಿ ಬರೆಯಿರಿ.

| | |
|---|---|
|  | 17 |
|  | 16 |
|  | 20 |
|  | 10 |

© NCERT not to be republished

E. ಕೆಲವು ಗೆಳೆಯರು ಆಡುತ್ತಿರಬೇಕಾದರೆ ಒಂದಷ್ಟು ಗೋಪುರಗಳನ್ನು ಕಟ್ಟಿದರು.



i. ಅತ್ಯಂತ ಎತ್ತರದ ಗೋಪುರಕ್ಕೆ ಸರಿ ಗುರುತು ✓ ಹಾಕಿ

ii. ಯಾವ ಗೋಪುರ ಅತಿ ಹೆಚ್ಚು ಚೌಕಗಳನ್ನು ಬಳಸಿಕೊಂಡಿದೆ ?

iii. ಯಾವ ಗೋಪುರವು ಅತ್ಯಂತ ಕಡಿಮೆ ಚೌಕಗಳನ್ನು ಬಳಸಿಕೊಂಡಿದೆ?

## ಮಾಡೋಣ

A. ಅತ್ಯಂತ ಸಣ್ಣ ಸಂಖ್ಯೆಯನ್ನು ಸುತ್ತುಗಟ್ಟಿ.

i. 8, 12, 6    ii. 14, 11, 19
